# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 05 ಪುಟಗಳು: 04 ಬೆಲೆ: 02 ರೂ. ದಿನಾಂಕ: 20-06-2026 ಶನಿವಾರ | 73536 56555


**ಜನಶ್ರೀವಾಣಿ**

ಚಿಂತೆ ಮಾಡಿ ಯಾಕೆ
ಕೊರಗಬೇಕು ಆ
ಚಿಂತೆ ಹುಟ್ಟಿಸಿದವರನ್ನು
ಮರೆತು ನಾವು ಮುಂದೆ
ನಡೆಯಬೇಕು

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

## 12 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ-2026

ಗದಗ: ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ , ಆಯುಷ್ ಇಲಾಖೆ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಗದಗ ಬೆಟಗೇರಿ ನಗರಸಭೆ ಇವರುಗಳ ಸಹಯೋಗದಲ್ಲಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ 12 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಜೂನ್ 21 ರಂದು ಬೆಳಿಗ್ಗೆ 6.30 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು. ಮಾಜಿ ಸಚಿವರು ಹಾಗೂ ಗದಗ ಶಾಸಕರಾದ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಶಾಸಕ ಹಾಗೂ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ , ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕ ಜಿ. ಎಸ್.ಪಾಟೀಲ, ಹಾವೇರಿ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ.ಗದ್ದಿಗೌಡರ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಡಿ.ಆರ್.ಪಾಟೀಲ, ನರಗುಂದ ಶಾಸಕ ಸಿ.ಸಿ.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕರುಗಳಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಯೋಜನೆ , ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿಗಳು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಂ.ವಿ.ವೆಂಕಟೇಶ್, ಆಯುಷ್ ಇಲಾಖೆಯ ಆಯುಕ್ತರಾದ ಡಾ.ಸುನೀಲ್ ಪನ್ವಾರ್ , ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ , ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ರೋಹನ್ ಜಗದೀಶ್ , ಜಿಲ್ಲಾ ಆಯುಷ್ ಅಧಿಕಾರಿ ಡಾ.ಜುಬೇದಾ ತಿಗಳೇರ ಆಗಮಿಸುವರು.

## ಪರೀಕ್ಷಾ ಕೇಂದ್ರಗಳ ಸುತ್ತಲೂ ಪ್ರತಿಬಂಧಕಾಜ್ಞೆ ಜಾರಿ

ಗದಗ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ , ನವದೆಹಲಿ ಇವರ ವತಿಯಿಂದ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ (National Eligibility cum Entrance Test (UG) ) -2026 ಪರೀಕ್ಷೆಗಳು ದಿನಾಂಕ 21-06-2026 ರಂದು ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 5 ಗಂಟೆಯವರಗೆ ನಡೆಯಲಿದೆ. ಗದಗ ಜಿಲ್ಲೆಯಲ್ಲಿ ಒಟ್ಟು 5 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 5 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ.

ಗದಗ ಜಿಲ್ಲೆಯ 5 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಜೂನ್ 21 ರ ಬೆಳಿಗ್ಗೆ 10 ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷೆಗೆ ನೇಮಕಗೊಂಡ ಅಧಿಕಾರಿಗಳನ್ನು ಹೊರತುಪಡಿಸಿ ಯಾವುದೇ ವ್ಯಕ್ತಿಗಳಿಗೆ ಪರೀಕ್ಷಾ ಕೇಂದ್ರದ ಒಳಗೆ ಪ್ರವೇಶವನ್ನು ನಿರ್ಬಂಧಿಸಿದೆ. ಐದು, ಐದಕ್ಕಿಂತ ಹೆಚ್ಚು ಜನರು ಗುಂಪುಕೂಡುವುದು ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಬುಕ್‌ಸ್ಟಾಲ್ , ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರಹೋಗುವ ಸಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು, ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ, ನವದೆಹಲಿಯು ಪ್ರತಿಬಂಧಿಸಿದ ಯಾವುದೇ ವಸ್ತುಗಳನ್ನು ಸಂಬಂಧಪಟ್ಟವರು ಪರೀಕ್ಷಾ ಕೇಂದ್ರದಡಿ ತೆಗೆದುಕೊಂಡು ಹೋಗಲು ನಿರ್ಬಂಧಿಸಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಮುನಿರಾಬಾದ್ ಉಪ ವಿಭಾಗ ವ್ಯಾಪ್ತಿಯಲ್ಲಿ ವಿದ್ಯುತ್ ಗ್ರಾಹಕರ ಸಂವಾದ ಸಭೆ

ಕೊಪ್ಪಳ: ಜೆಸ್ಕಾಂ ಮುನಿರಾಬಾದ್ ಕಾರ್ಯ ಮತ್ತು ಪಾಲನಾ ಉಪ ವಿಭಾಗ ಕಛೇರಿ ಆವರಣದಲ್ಲಿ ಜೂನ್ 20 ರಂದು ಬೆಳಿಗ್ಗೆ 11 ಗಂಟೆಗೆ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಏರ್ಪಡಿಸಲಾಗಿದೆ.

ಮುನಿರಾಬಾದ್ ಉಪ ವಿಭಾಗ ವ್ಯಾಪ್ತಿಯ ಜೆಸ್ಕಾಂ ಮುನಿರಾಬಾದ್ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಪಂಚಾಯತ್‌ಗಳಾದ ಮುನಿರಾಬಾದ್, ಹುಲಿಗಿ, ಹಿಟ್ನಾಳ, ಅಗಳಕೇರಾ, ಶಿವಪುರ, ಗಿಣಿಗೇರಾ, ಹಿರೇಬಗನಾಳ, ಕುಣಿಕೇರಾ, ಕಲ್‌ತಾವರಗೇರಾ, ಬಂಡಿಹರ್ಲಾಪುರ, ಬೂದುಗುಂಪಾ, ಗುಳದಳ್ಳಿ, ಬೇವಿನಹಳ್ಳಿ, ಇಂದರಗಿ, ಹೊಸಳ್ಳಿ ಹಾಗೂ ವಣಬಳ್ಳಾರಿಯ ಎಲ್ಲಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಕಡ್ಡಾಯವಾಗಿ ಈ ವಿದ್ಯುತ್ ಗ್ರಾಹಕರ ಸಂವಾದ ಸಭೆಗೆ ಹಾಜರಾಗಿ ಸದುಪಯೋಗ ಪಡೆದುಕೊಳ್ಳುವಂತೆ ಜೆಸ್ಕಾಂ ಮುನಿರಾಬಾದ್ ಕಾರ್ಯ ಮತ್ತು ಪಾಲನಾ ಉಪ ವಿಭಾಗ ಕಛೇರಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಭೆ

# ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪಾರದರ್ಶಕವಾಗಿರಲಿ ಅಧಿಕಾರಗಳಿಗೆ ಜಿಲ್ಲಾಧಿಕಾರಿ ಸಿ.ಎನ್ ಶ್ರೀಧರ್ ಸೂಚನೆ

ಗದಗ: ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಗುರುವಾರ ಜೂನ್ (18) ರಂದು ಜರುಗಿದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಖಐಖ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹೈಸ್ಕೂಲ್ ಮತ್ತು ಪಿಯುಸಿ ಮಟ್ಟದಲ್ಲಿ 9, 10, 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಇಎಲ್‌ಸಿ ಕ್ಲಬ್‌ಗಳ ಮೂಲಕ ಜೂನ್ ತಿಂಗಳಿನಲ್ಲಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಲು ನಿರ್ದೇಶಿಸಲಾಗಿದೆ. ಕಾಲೇಜಿನ ಮುಖ್ಯಸ್ಥರು ಅಥವಾ ಪ್ರಾಂಶುಪಾಲರು ಇದರ ಅಧ್ಯಕ್ಷರಾಗಿದ್ದು, ಒಬ್ಬರು ಶಿಕ್ಷಕರು ಇದರ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಜೊತೆಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಪೈಕಿ ಇಬ್ಬರನ್ನು 'ಕ್ಯಾಂಪಸ್ ಅಂಬಾಸಿಡರ್ಸ್' ಆಗಿ ನೇಮಕ ಮಾಡಲಾಗುವುದು. ಚುನಾವಣೆ ಆಯೋಗ ನೀಡಿರುವ ಶಾಲಾ-ಕಾಲೇಜುಗಳಲ್ಲಿ ಮತದಾನ ಜಾಗೃತಿ ಮತ್ತು ಕ್ಯಾಲೆಂಡರ್ ಆಫ್ ಇವೆಂಟ್ಸ್ 'ಕ್ಯಾಂಪಸ್ ಇವೆಂಟ್ಸ್' ಅಡಿಯಲ್ಲಿ ಜೂನ್ 30ರ ಒಳಗಾಗಿ ಎಸ್‌ಐಆರ್ (SIR) ಗೆ ಸಂಬಂಧಿಸಿದ 30 ನಿಮಿಷಗಳ ಚಟುವಟಿಕೆಯನ್ನು ಎಲ್ಲಾ ಕ್ಲಬ್‌ಗಳಲ್ಲಿ ಕಡ್ಡಾಯವಾಗಿ ಹಮ್ಮಿಕೊಂಡು, ಅದರ ಫೋಟೋ ಮತ್ತು ವಿವರಗಳನ್ನು ವೆಬ್‌ಸೈಟ್‌ನಲ್ಲಿ



ಅಪ್‌ಲೋಡ್ ಮಾಡಲು ತಿಳಿಸಿದರು.

ಜಿಲ್ಲೆಯಲ್ಲಿ ಮತದಾರರ ಜಾಗೃತಿಯನ್ನು ಮತ್ತಷ್ಟು ಹೆಚ್ಚಿಸಲು ಸರ್ಕಾರಿ ಇಲಾಖೆಗಳು ಹಾಗೂ ಖಾಸಗಿ ವಲಯಗಳಲ್ಲಿ 'ವೋಟರ್ಸ್ ಅವೇರ್ನೆಸ್ ಫೋರಂ' ಸ್ಥಾಪಿಸಲು ನಿರ್ಧರಿಸಲಾಗಿದೆ. ಎಲ್ಲಾ ಇಒ (ಇಔ) ಗಳಿಗೆ ಈ ಕುರಿತು ಲಾಗಿನ್ ಐಡಿ ನೀಡಲಾಗಿದ್ದು, ಮಾಸ್ಟರ್ ಟ್ರೈನರ್ಸ್ ಮೂಲಕ ಇವುಗಳನ್ನು ಶೀಘ್ರವಾಗಿ ಆಕ್ಟಿವೇಟ್ ಮಾಡಲು ಗಡುವು ನೀಡಲಾಗಿದೆ ಎಂದರು.

ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ತಮ್ಮ ಇಲಾಖೆಯ ಸಿಬ್ಬಂದಿಗಳನ್ನು ಒಳಗೊಂಡಂತೆ ಸ್ವತಂತ್ರ ಫೋರಂ ರಚಿಸಿ, ಸ್ವೀಪ್ (SVEEP) ಹಾಗೂ ಎಸ್‌ಐಆರ್ ಸಂಬಂಧಿತ ಆಡಿಯೋ, ವಿಡಿಯೋ ಮತ್ತು ಜಾಗೃತಿ ಸಾಮಗ್ರಿಗಳನ್ನು ಪ್ರಸಾರ ಮಾಡಲು ಕ್ರಮ ಕೈಗೊಳ್ಳಬೇಕು. ಸೋಮವಾರದ ಒಳಗಾಗಿ ಇದರ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದರು. ಪ್ರತಿ ಬೂತ್ ಮಟ್ಟದಲ್ಲಿ 'ಚುನಾವಣಾ ಪಾಠಶಾಲೆ' ಚುನಾವಣಾ ಸಾಕ್ಷರತೆಯನ್ನು ತಳಮಟ್ಟಕ್ಕೆ ಕೊಂಡೊಯ್ಯುವ ಉದ್ದೇಶದಿಂದ ಪ್ರತಿ ಬೂತ್ ಮಟ್ಟದಲ್ಲಿ 'ಚುನಾವಣಾ ಪಾಠಶಾಲೆ' (ಚುನಾವಣಾ ಜಾಗೃತಿ ಸಮಿತಿ) ಯನ್ನು ರಚಿಸಲಾಗುವುದು. ಇದರ ನೋಡಲ್ ಅಧಿಕಾರಿಯಾಗಿ ಆಯಾ ಭಾಗದ ಬಿಎಲ್‌ಒ (BLO) ಅವರು ಕಾರ್ಯನಿರ್ವಹಿಸಲಿದ್ದಾರೆ. ಕಾಲೇಜು ವಿದ್ಯಾರ್ಥಿಗಳನ್ನು ಹೊರತುಪಡಿಸಿ ಸ್ಥಳೀಯ ಯುವಕರು, ರೈತರು, ಮಹಿಳೆಯರು ಮತ್ತು ಸಮುದಾಯದ ಇತರ ಸದಸ್ಯರನ್ನು ಈ ಸಮಿತಿಯಲ್ಲಿ ಒಳಗೊಳ್ಳುವ ಮೂಲಕ ವ್ಯಾಪಕ ಜಾಗೃತಿ ಮೂಡಿಸಲು ಯೋಜನೆ ರೂಪಿಸಲಾಗಿದೆ. ಎಸ್‌ಐಆರ್ (SIR) ಪ್ರಕ್ರಿಯೆ ಮತ್ತು ಮನೆ ಮನೆ ಸಮೀಕ್ಷೆ ಮತದಾರರ ಪಟ್ಟಿಯ ನೈಜತೆ ಹಾಗೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಎಸ್‌ಐಆರ್ ಪ್ರಕ್ರಿಯೆಯಡಿ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದರು.

2002ರ ಮತದಾರರ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು, ಪ್ರಸ್ತುತ 2025ರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡಲಾಗಿದೆ. 2002ರ ನಂತರ ಹೊಸದಾಗಿ ಸೇರ್ಪಡೆಯಾದವರು ಅಥವಾ 18 ವರ್ಷ ತುಂಬಿದ ಯುವ ಮತದಾರರ ವಿವರಗಳನ್ನು ಅವರ ಪೋಷಕರು ಅಥವಾ ರಕ್ತಸಂಬಂಧಿಗಳ ವಿವರಗಳೊಂದಿಗೆ ಲಿಂಕ್ ಮಾಡುವ ಮೂಲಕ ಎನ್ಯುಮರೇಷನ್ ಫಾರ್ಮ್ ಭರ್ತಿ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ನಿಖರವಾದ ಮಾಹಿತಿ ಸಂಗ್ರಹಕ್ಕಾಗಿ ಪ್ರತಿ ಬಿಎಲ್‌ಒಗಳು ಕನಿಷ್ಠ 3 ಬಾರಿ ಸಂಬಂಧಿತ ಮನೆಗಳಿಗೆ ಭೇಟಿ ನೀಡಬೇಕು. ಭೇಟಿ ನೀಡಿ ಫಾರ್ಮ್ ಪಡೆದ ಮನೆಗಳಿಗೆ ಚುನಾವಣಾ ಆಯೋಗದ ನಿರ್ದೇಶನದಂತೆ ಚೌಕಾಕಾರದ ವಿಶೇಷ ಸ್ಟಿಕ್ಕರ್ ಅನ್ನು ಅಂಟಿಸಲಾಗುವುದು. ವಾಸವಿಲ್ಲದ ಅಥವಾ ಮೃತಪಟ್ಟ ಮತದಾರರ ವಿವರಗಳನ್ನು ಪಟ್ಟಿಯಿಂದ ಕೈಬಿಡಲು ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದರು.

"ಮತದಾರರ ಪಟ್ಟಿ ಪರಿಷ್ಕರಣೆಯ ಈ ಮೂರೂ ಸಮಿತಿಗಳನ್ನು (ಇಎಲ್‌ಸಿ ಕ್ಲಬ್, ವೋಟರ್ಸ್ ಅವೇರ್ನೆಸ್ ಫೋರಂ, ಚುನಾವಣಾ ಪಾಠಶಾಲೆ) ತಕ್ಷಣವೇ ಸಕ್ರಿಯಗೊಳಿಸಬೇಕು. ತಹಶೀಲ್ದಾರರು ಹಾಗೂ ಇಒಗಳು ಸಮನ್ವಯತೆಯಿಂದ ಕೆಲಸ ಮಾಡಿ, ನಿಗದಿತ ಗಡುವಿನೊಳಗೆ ನೂರಕ್ಕೆ ನೂರರಷ್ಟು ಪ್ರಗತಿ ಸಾಧಿಸಬೇಕು" ಎಂದು ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ನಿರ್ದೇಶನ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳಾದ ಎ. ಎ. ಕಂಬಾಳಿಮಠ ಮಾತನಾಡಿ ಜಿಲ್ಲೆಯಲ್ಲಿ ಪ್ರಸ್ತುತ ಒಟ್ಟು 536 ಇಎಲ್‌ಸಿ ಕ್ಲಬ್‌ಗಳಿದ್ದು, ಇದರಲ್ಲಿ 325 ಶಾಲೆಗಳು, 101 ಪಿಯು ಬೋರ್ಡ್, 57 ಕಾಲೇಜುಗಳು ಹಾಗೂ ಐಟಿಐ ಮತ್ತು ಡಿಪ್ಲೊಮಾ ಸೇರಿದಂತೆ 53 ಸ್ವತಂತ್ರ ಸಂಸ್ಥೆಗಳು ಒಳಗೊಂಡಿವೆ.


4ನೇ ಪುಟಕ್ಕೆ....

## ವರುಣನ ಕೃಪೆಗೆ ಕಪ್ಪೆ ಮದುವೆ : ಲಕ್ಷ್ಮೇಶ್ವರದಲ್ಲಿ ನೀರೆರಚುವ ಹಬ್ಬ ಸಂಭ್ರಮ

ಲಕ್ಷ್ಮೇಶ್ವರ: ಪಟ್ಟಣದ ಕದರಗೇರಿ ಓಣಿಯಲ್ಲಿ ನಾಗರಿಕರು ವರುಣನ ಕೃಪೆಗಾಗಿ ಕಪ್ಪೆ ಮದುವೆ ಮತ್ತು ನೀರೆರಚುವ ಹಬ್ಬ ಆಚರಣೆ ಮಾಡಿದರು.

ಮೇ ಅಂತ್ಯ ಮತ್ತು ಜೂನ್ ಮೊದಲ ವಾರದಲ್ಲಿ ರೈತರು ಬಿತ್ತನೆ ಮಾಡಿರುವ ಬೆಳೆಗೆ ಸದ್ಯ ಮಳೆಯ ಅವಶ್ಯಕತೆಯಿದೆ. ಕಳೆದ ಎಂಟತ್ತು ದಿನಗಳಿಂದ ಮಳೆ ಮಾಯವಾಗಿದ್ದು ಬಿರುಬಿಸಿಲು ಇದೀಗ ಮೊಳಕೆಯೊಡೆದು ಚಿಗುರಿರುವ ಸಸಿ ಬೆಳೆ ಬಾಡುವಂತಾಗಿದೆ, ಇದರಿಂದ ಚಿಂತೆಗೀಡಾಗಿರುವ ರೈತರು ವರುಣ ಕೃಪೆಗೆ ಮೊರೆ ಹೋಗಿದ್ದಾರೆ. ಈ ಹಿನ್ನೆಲೆ ಗುರುವಾರ ಕದರಗೇರಿ ಓಣಿಯ ರೈತ ಸಮುದಾಯ ಸಾಂಪ್ರದಾಯಿಕ ಪದ್ಧತಿಗಳೊಂದಿಗೆ ಕಪ್ಪೆ ಮದುವೆ ಆಚರಿಸಿದರು. ಬಳಿಕ ಓಣಿಯಲ್ಲಿ ಮಹಿಳೆಯರು, ಪುರುಷರು, ಮಕ್ಕಳು ಪರಸ್ಪರ ನೀರೆಚುವ ಆಚರಣೆ ಮಾಡಿದರು. ಕಪ್ಪೆಗಳಿಗೆ ಮದುವೆ ಮಾಡಿದರೆ ಮಳೆರಾಯ ಬರುತ್ತಾನೆ ಎಂಬ ನಂಬಿಕೆಯಿಂದ ಗ್ರಾಮೀಣ ಪ್ರದೇಶದಲ್ಲಿ ಈ ರೀತಿಯ ಮದುವೆಗಳನ್ನು ಮಾಡಲಾಗುತ್ತದೆ, ಆರಂಭದಲ್ಲಿ ಆರ್ಭಟ ತೋರಿದ ಮುಂಗಾರು ಪೂರ್ವ ಮಳೆಗಳು, ರೋಹಿಣ ಸುರಿಯಲಿಲ್ಲ, ಮೃಗಶಿರಾ ಅರ್ಭಟಿಸಲಿಲ್ಲ ಎನ್ನುತ್ತಾ ಕಾಲ ಕಳೆಯುತ್ತಿರುವ ರೈತರು ಪ್ರಮುಖ ಮಳೆಗಳು ಧರೆಯತ್ತ ಇಣುಕಲಿಲ್ಲ. ರೈತರು ಮುಂಗಾರು ಬಿತ್ತನೆ ಮಾಡಿ ಇದೀಗ ಅವಶ್ಯವಾಗಿರುವ ಮೇಘರಾಜನ ಆಗಮನಕ್ಕಾಗಿ ಕಾಯುತ್ತಿದ್ದಾರೆ.

ಮಳೆ ಕೈಕೊಟ್ಟಾಗ ವರುಣನನ್ನು ಒಲಿಸಲು ಕಪ್ಪೆ ಹಾಗೂ ಕತ್ತೆಗಳ ಮದುವೆ ಮಾಡುವುದು, ಗುರ್ಜಿ ಆಡುವುದು, ಭಜನೆ ಮಾಡುವುದು ಸಂಪ್ರದಾಯ. ಅದರಂತೆ ಕದರಗೇರಿ ಓಣಿಯ ದೇವಸ್ಥಾನದ ಆವರಣದಲ್ಲಿ ಅದ್ದೂರಿ ಮದುವೆ ಮಾಡಿದರು. ದೇವಸ್ಥಾನದ ಆವರಣದಲ್ಲಿ ರಂಗೋಲಿ ಹಾಕಿ, ತಳಿ-ತೋರಣ ಕಟ್ಟಲಾಗಿತ್ತು. ನೆರೆದಿದ್ದ ನೂರಾರು ಜನರು ಕಪ್ಪೆಗಳಿಗೆ ಅಕ್ಷ ತೆ ಹಾಕಿ ಮಳೆ ಬರಲಿ ಎಂದು ಪ್ರಾರ್ಥಿಸಿದರು. ಇದರ ಅಂಗವಾಗಿ ಪುಟ್ಟ





ಪುಟ್ಟ ಎರಡು ಮಕ್ಕಳನ್ನು ಮದು ಮಕ್ಕಳನ್ನಾಗಿ ಮಾಡಿ ಅವರಿಗೆ ಅರಿಷಿನ ಶಾಸ್ತ್ರ ಮದುವೆ ಶಾಸ್ತ್ರವನ್ನು ನೆರವೇರಿಸಿದರು. ಮದುವೆ ಆಚರಣೆ ನಂತರ ಸಿದ್ಧಪಡಿಸಿದ್ದ ಸಂಗಟಿ- ಸಾರಿನ ಮದುವೆ ಊಟ ಸವಿದರು.

ಈ ಕಾರ್ಯಕ್ರಮದಲ್ಲಿ ಓಣಿಯ ಲಕ್ಷ್ಮವ್ವ ಗಿಡಿಬಿಡಿ, ದೀಪಾ ಗಿಡಿಬಿಡಿ, ರೇವತಿ ಉಪನಾಳ, ವಾಣಿ ಹತ್ತಿ, ನಿಂಗವ್ವ ಟೋಕಾಳಿ, ಗದಿಗೆವ್ವ ಟೋಕಾಳಿ, ಮಂಜವ್ವ ಗಿಡಿಬಿಡಿ, ಬಸಮ್ಮ ಗಿಡಿಬಿಡಿ, ಗಂಗಮ್ಮ ಗಡೆಪ್ಪನವರ, ಸಾವಿತ್ರಿ ಗಡೆಪ್ಪನವರ, ಶಾಂತಾ ಡಂಬಳ, ಅನ್ನಪೂರ್ಣ ಲಿಂಗಶೆಟ್ಟಿ, ಲಕ್ಷ್ಮವ್ವ ಹುರಕನವರ, ರೇಣುಕಾ ಅಡರಕಟ್ಟಿ, ನೀಲಪ್ಪ ಹತ್ತಿ, ಸೋಮೇಶ ಉಪನಾಳ, ಮಹಾದೇವಪ್ಪ ಗಿಡಿಬಿಡಿ, ಮಂಜುನಾಥ ಲಿಂಗಶೆಟ್ಟಿ, ಸೋಮಣ್ಣ ಚಂದರಗಿ, ಅಜ್ಜಪ್ಪ ಬಡಿಗೇರ,ಗಂಗಾಧರ ಶಿರಿಗಣ್ಣವರ, ಶಿವಪ್ಪ ಗಿಡಿಬಿಡಿ ಸೇರಿ ಮಹಿಳೆಯರು ಮಕ್ಕಳು ಪಾಲ್ಗೊಂಡಿದ್ದರು.

## ಗಾಂಜಾ ಸೇವನೆ ಹಾಗೂ ಮಾರಾಟ ಮಾಡುತ್ತಿದ್ದವರ ಬಂಧನ - ಎಸ್.ಪಿ ರೋಹನ್ ಜಗದೀಶ್ ಅವರಿಂದ ಪ್ರಶಂಸೆ

ಲಕ್ಷ್ಮೇಶ್ವರ: ಲಕ್ಷೇಶ್ವರ ಶಹರದ ಮುಕ್ತಿನಗರದಲ್ಲಿ ಮಾದಕ ಪದಾರ್ಥವಾದ ಗಾಂಜಾವನ್ನು ಸಿಗರೇಟಿನ ತಂಬಾಕು ಹೊರ ತೆಗೆದು ಆಭಾಗದಲ್ಲಿ ತುಂಬಿ, ಸೇವನೆ ಮಾಡುತಿದ್ದ ಸಂತೋಷ ಉಪ್ಪಾರ ಹಾಗೂ ಸಾಧಿಕ್ ರಿತ್ತಿ ಇವರು ಪೊಲೀಸರ ಕೈಸೆರೆಯಾಗಿದ್ದು, ಎನ್‌ಡಿಪಿಎಸ್ ಆಯಕ್ಟ ನಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಅಲ್ಲದೆ ಜೂನ್ 18ರಂದು ಗದಗದಿಂದ ಲಕ್ಷೇಶ್ವರ ಬರುವ ದಾರಿಯಲ್ಲಿ ಗಾಂಜಾ ಮಾರಾಟ ಮಾಡುತಿದ್ದ ಆರೋಪಿತರಾದ ನಾಗರಾಜ ಮುತಗಾರ ಪ್ರಶಾಂತ ಕಟಗೇರಿ, ಗಂಗಪ್ಪ ಚವ್ಹಾಣ, ಗದಗ-ಬೆಟಗೇರಿ ನಿವಾಸಿಗಳಾಗಿದ್ದು ಇವರನ್ನು ಸಹ ಪೊಲೀಸರು ಬಂಧಿಸಿ ಅವರಲ್ಲಿದ್ದ ಒಟ್ಟು 2.365 ಕಿಲೋ. ಗ್ರಾಂ ತೂಕದ 1,18,250 ಮೌಲ್ಯದ ಗಾಂಜಾವನ್ನು ವಶಪಡಿಸಿಕೊಂಡಿದ್ದು. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ ಈ ಪ್ರಕರಣದಲ್ಲಿ ದಾಳಿ ಮಾಡಿ ದೂರು ನೀಡಿದ ಅಪರಾಧ ವಿಭಾಗದ ಪಿ ಎಸ್ ಐ ಟಿ.ಕೆ.ರಾಠೋಡ ಸಿಬ್ಬಂದಿ ವರ್ಗ ಹಾಗೂ ತನಿಖಾಧಿಕಾರಿಯಾದ ಪಿ ಎಸ್ ಐ ನಾಗರಾಜ ಗಡದ ಇವರಿಗೆ ಮಾರ್ಗದರ್ಶನ ನೀಡಿದ ಡಿ.ಎಸ್.ಪಿ ಸಾಹೇಬರು ಗದಗ ಉಪ-ವಿಭಾಗ ಗದಗ ಹಾಗೂ ಸಿಪಿಐ ಬಿ.ವಿ.ನ್ಯಾಮಗೌಡ ಶಿರಹಟ್ಟಿ ವೃತ್ತ ರವರಿಗೆ ಜಿಲ್ಲಾ ಪೊಲೀಸ್ ಅಧೀಕ್ಷಕ ರೋಹನ ಜಗದೀಶ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

# ಜಲಾಗಾರ ನಿರ್ಮಾಣದಿಂದ ತೊಂದರೆಯಿಲ್ಲ : ಜಿಲ್ಲಾಧಿಕಾರಿ ಸಿ.ಎನ್ ಶ್ರೀಧರ್

ಲಕ್ಷ್ಮೇಶ್ವರ: ಪಟ್ಟಣದ ಪುರಸಭೆ ಕಾಲೇಜ್ ಕ್ಯಾಂಪಸ್‌ನಲ್ಲಿ ಕೆಯುಡಬ್ಲೂಎಸ್‌ನಿಂದ ನಿರ್ಮಾಣಗೊಳ್ಳುತ್ತಿರುವ ಜಲಾಗಾರ ಕಾಮಗಾರಿ ಸ್ಥಳಾಂತರಿಸುವಂತೆ ಕಾಲೇಜಿನ ಹಳೇ ವಿದ್ಯಾರ್ಥಿಗಳ ಒಕ್ಕೂಟ ಪ್ರತಿಭಟನೆಯಿಂದ ಸ್ಥಗಿತಗೊಂಡಿದ್ದ ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಬೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದರು.

ಕುಡಿಯುವ ನೀರಿನ ಯೋಜನೆ ಮತ್ತು ಜಲಾಗಾರ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ ಆದರೆ ಕಾಲೇಜು ಕ್ಯಾಂಪಸ್‌ನಿಂದ ಕಾಮಗಾರಿ ಸ್ಥಳಾಂತರಿಸಬೇಕು. ಕಾರಣ ಈ ಕಾಲೇಜು ಸರ್ಕಾರಕ್ಕೆ ಹಸ್ತಾಂತಗೊಳ್ಳಲಿದ್ದು ಭವಿಷ್ಯದಲ್ಲಿ ಕಟ್ಟಡ ವಿಸ್ತರಣೆ, ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ಅಡ್ಡಿಯಾಗಲಿದೆ ಎಂದು ಕಾಮಗಾರಿಗೆ ಅಡ್ಡಿಪಡಿಸಲಾಗಿತ್ತು. ಇಂಜನೀಯರ್ ಮತ್ತು ಗುತ್ತಿಗೆದಾರರಿಂದ ಮಾಹಿತಿ ಪಡೆದು ಜಲಾಗಾರ ನಿರ್ಮಾಣದಿಂದ ಯಾವುದೇ ತೊಂದರೆಯಾಗುವದಿಲ್ಲ. ಇದು ಪುರಸಭೆ ಆಸ್ತಿಯಾಗಿದ್ದು ನೀರು ಜನರ ಮೊದಲ ಅಗತ್ಯತೆಯಾಗಿದೆ. ಜನರಿಗಾಗಿ ಸರಕಾರ



ಕೋಟ್ಯಾಂತರ ರೂ ಖರ್ಚು ಮಾಡಿ ಕೈಗೊಂಡ ಯೋಜನೆಗೆ ವಿರೋಧ ಮಾಡುವುದು ಸರಿಯಲ್ಲ. ಕಾಮಗಾರಿ ಅಡ್ಡಿಪಡಿಸಲು ಸೂಕ್ತ ಕಾರಣ, ದಾಖಲೆಗಳಿದ್ದರೆ ಕೊಡಿ ಪರಿಶೀಲಿಸುತ್ತೇನೆ ಎಂದ ಅವರು ಕಾಮಗಾರಿ ತೀವ್ರಗತಿಯಲ್ಲಿ ಮುಂದುವರಿಯಲಿ ಆದರೆ ನಿರ್ಮಾಣದ ಕೆಲಸಕ್ಕೆ ಬಳಸುವ ಸಾಮಗ್ರಿಗಳನ್ನು ಕಾಲೇಜು ಕ್ಯಾಂಪಸ್ ಹೊರಗೆ ಸಂಗ್ರಹಿಸಿ. ಅಲ್ಲದೇ ಒಟ್ಟು ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವ ಬಗ್ಗೆ ತಿಳಿದು ಬಂದಿದ್ದು ಇದರಿಂದ ಪಟ್ಟಣಕ್ಕೆ ಕುಡಿಯುವ ನೀರಿನ ಪೊರೈಕೆಯಲ್ಲಿ ಸಾಕಷ್ಟು ವ್ಯತ್ಯಯವಾಗುತ್ತಿದೆ. ಪೈಪಲೈನ್, ಪಂಪಸೆಟ್ ಅಳವಡಿಕೆ ಸೇರಿ ಒಟ್ಟು ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿದರು. ಈ ಬಗ್ಗೆ ಕೆಯುಡಬ್ಲೂಎಸ್ ಮತ್ತು ಪುರಸಭೆ ಅಧಿಕಾರಿಗಳು ನಿಗಾವಹಿಸಬೇಕು. ನಾನೂ ಸಹ ಕಾಮಗಾರಿ ಪರಿಶೀಲನೆಗೆ ಬರುತ್ತೇನೆ ಎಂದರು. ಈ ವೇಳೆ ಪಟ್ಟಣದಲ್ಲಿ ಒಳಚರಂಡಿ ಯೋಜನೆಯಿಂದ ಹದಗೆಟ್ಟ ರಸ್ತೆಗಳು, ಕಾಲೇಜಿನ ಕಟ್ಟಡ ದುರಸ್ಥಿ ಬಗ್ಗೆ ಕ್ರಿಯಾಯೋಜನೆ ಸಿದ್ದಪಡಿಸಿ ಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿ ಇಂಜನೀಯರ ಜೆ ಬಿ ಹೊಸಮನಿ, ಗ್ರೇಡ್ 2ತಹಸೀಲ್ದಾರ ಮಂಜುನಾಥ ಅಮಾಸಿ ,ಪುರಸಭೆ ಹಿರಿಯ ಅರೋಗ್ಯ ನಿರೀಕ್ಷಕ ಮಂಜುನಾಥ ಮುದಗಲ್, ಇಂಜನೀಯರ ಈರಣ್ಣ ದುರಗಣ್ಣವರ, ಲಿಂಬಯ್ಯನಮಠ, ಕಂದಾಯ ಅಧಿಕಾರಿ ಎಂ.ಎ.ನದಾಫ ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ ಕಾಶಪ್ಪನವರ, ಕೃಷಿ ಅಧಿಕಾರಿ ಚಂದ್ರಶೇಖರಗೌಡ ನರಸಮ್ಮನವರ, ಪದವಿ ಕಾಲೇಜು ಪ್ರಭಾರಿ ಪ್ರಾಚಾರ್ಯ ವಾಗೀಶ ನಾಗಶೆಟ್ಟಿ, ಡಿ.ಬಿ ಫಕ್ಕೀರಪ, ಮಹೇಶ ಹೊಗೆಸೊಪ್ಪಿನ, ಮಹೇಶ ಕಲಘಟಗಿ, ಮಹಾಂತೇಶ ತೋಟದ, ನಾಗರಾಜ ಚಿಂಚಲಿ ಅನೇಕರು ಇದ್ದರು.


## ಮಹಜರು ವೇಳೆ ಪೊಲೀಸರ ಮೇಲೆ ಹಲ್ಲೆ : ಕೊಲೆ ಆರೋಪಿಗೆ ಪೊಲೀಸರ ಗುಂಡೇಟು



ಮಂಡ್ಯ: ಮಹಜರ್‌ಗೆ ಕರೆದೊಯ್ದಿದ್ದ ವೇಳೆ ಪೊಲೀಸರ ಮೇಲೆಯೇ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ ಆರೋಪಿ ಪೊಲೀಸರ ಗುಂಡೇಟಿನಿಂದ ಗಾಯಗೊಂಡು ಸಿಕ್ಕಿಬಿದ್ದಿದ್ದಾನೆ. ಭೀಮನಹಳ್ಳಿ ಗ್ರಾಮದ ಮಹೇಶ ಕೊಲೆ ಪ್ರಕರಣದಲ್ಲಿ ಬಂಧಿತನಾಗಿರುವ ಆರೋಪಿ. ಮೂಲತಃ ಮಳವಳ್ಳಿ ತಾಲ್ಲೂಕಿನ ರಾಮನಾಥಮೋಳೆ ಗ್ರಾಮದವನಾದ ಈತ ಹಾಲಿ ರಾಮನಗರ ನಿವಾಸಿಯಾಗಿದ್ದು, ಕೊಲೆ ಪ್ರಕರಣದಲ್ಲಿ ಕಿರುಗಾವಲು ಪೊಲೀಸ-ರಿಂದ ಬಂಧಿತನಾಗಿದ್ದನು.

ಕೊಲೆಗೆ ಬಳಸಿದ್ದ ಚಾಕುವನ್ನು ಡಿ.ಹಲಸಹಳ್ಳಿ ಬಳಿಯ ಹುಲ್ಲೇಗಾಲ ನಾಲಾರಸ್ತೆ ಬದಿಯಲ್ಲಿ ಎಸೆದಿರುವುದಾಗಿ ಆರೋಪಿತಿಳಿಸಿದ್ದ. ಅದರಂತೆ ನಿನ್ನೆ ಮಧ್ಯಾಹ್ನ 3.30ರ ಸುಮಾ-ರಿಗೆ ಆರೋಪಿಯನ್ನು ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಲಾಗುತ್ತಿತ್ತು. ಈ ವೇಳೆ ಮೂತ್ರವಿಸರ್ಜನೆ ನೆಪದಲ್ಲಿ ರಸ್ತೆ ಬದಿಗೆ ಹೋದ ಆರೋಪಿ, ಅಲ್ಲೇ ಬಿದ್ದಿದ್ದ ಬಿಯರ್ ಬಾಟಲಿಯಿಂದ ಮುಖ್ಯ ಆರಕ್ಷಕ ಪ್ರಭುಸ್ವಾಮಿ ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ಪಿಎಸ್‌ಐ ಅವರು ಆರೋಪಿಗೆ ಎಚ್ಚರಿಕೆ ನೀಡಿದರೂ ಆತ ಲೆಕ್ಕಿಸದೆ ಮತ್ತೆ ಹಲ್ಲೆ ನಡೆಸಿದಾಗ ಆತರಕ್ಷಣೆಗಾಗಿ ಪಿಎಸ್‌ಐ ರವಿಕುಮಾರ್ ಅವರು ಹಾರಿಸಿದ ಗುಂಡು ಆರೋಪಿಯ ಕಾಲಿಗೆ ತಗುಲಿ ಆತ ಕುಸಿದು ಬಿದ್ದಿದ್ದಾನೆ. ಆರೋಪಿಯನ್ನು ವಶಕ್ಕೆ ಪಡೆದು ಪಟ್ಟಣದ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಕಾರ್ಯಾಚರಣೆ ವೇಳೆ ಗಾಯಗೊಂಡಿರುವ ಹೆಚ್.ಸಿ ಪ್ರಭುಸ್ವಾಮಿ ಅವರಿಗೂ ಚಿಕಿತ್ಸೆ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಎಸ್‌ಪಿ ಡಾ. ವಿ.ಜೆ. ಶೋಭಾರಾಣಿ ಮಾತನಾಡಿ, ಸ್ಥಳ ಮಹಜರು ವೇಳೆ ಆರೋಪಿ ಪೊಲೀಸ್ ಸಿಬ್ಬಂದಿ ಮೇಲೆಯೇ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದಾಗ ಆತನನ್ನುಬಂಧಿಸಲಾಗಿದೆ ಎಂದು ತಿಳಿಸಿದರು. ಪ್ರಕರಣದ ತನಿಖೆ ಮುಂದುವರಿದಿದೆ.

## ಹೂಗ್ಲಿ ನದಿಯಲ್ಲಿ 500 ದೋಣಿಗಳಲ್ಲಿ ಯೋಗಾ



ಕೋಲ್ಕತ್ತಾ: ಇದೇ ಜೂನ್ 21 ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಹೂಗ್ಲಿ ನದಿಯ ಬಾಬುಘಾಟ್‌ನಲ್ಲಿ ಯೋಗ ಪ್ರದರ್ಶನಕ್ಕಾಗಿ ಸುಂದರ್‌ಬನ್?ಸನ ದೋಣಿಗಳು ಸೇರಿದಂತೆ 500 ಕ್ಕೂ ಹೆಚ್ಚು ಪ್ರವಾಸಿ ಮತ್ತು ಪ್ರಯಾಣಿಕರ ದೋಣಿಗಳು ಸಂಗಮಿಸಲಿವೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯ ಸಾರಿಗೆ ಇಲಾಖೆಯಿಂದ ಆಹ್ವಾನ ಬಂದಿದೆ ಎಂದು ಸುಂದರ್‌ಬನ್ಸ್ ದೋಣಿ ಸಂಘದ ಅಧಿಕಾರಿಗಳು ತಿಳಿಸಿದ್ದಾರೆ, ಈ ಸಂದರ್ಭದಲ್ಲಿ ದೋಣಿಗಳನ್ನು ನೀರಿನ ಮೇಲೆ ಯೋಗ ಭಂಗಿಗಳನ್ನು ರೂಪಿಸಲು ಸಹ ಬಸಿ ಹೊಸ ಗಿನ್ನೆಸ್ ವಿಶ್ವ ದಾಖಲೆಯನ್ನು ಪ್ರಯತ್ನಿಸಲು ಸಿದ್ಧತೆಗಳು ನಡೆಯುತ್ತಿವೆ, ಏಕೆಂದರೆ ದೋಣಿಗಳಲ್ಲಿ ನಡೆಸುವ ಪ್ರಸ್ತುತ ಯೋಗ ದಾಖಲೆಯೂ ಪರಿಗಣನೆಯಲ್ಲಿದೆ ಎಂದು ಮೂಲಗಳು ತಿಳಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಾದ ರೆಡ್ ರೋಡ್‌ನಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಮುಖ ಸಮಾರಂಭವನ್ನು ಮುನ್ನಡೆಸಲಿದ್ದಾರೆ, ಅಲ್ಲಿ 35,000 ಜನರು ಒಟ್ಟಾಗಿ ಯೋಗ ಪ್ರದರ್ಶನ ನೀಡುವ ನಿರೀಕ್ಷೆಯಿದೆ. ಆರೋಗ್ಯಕರ ವಯಸ್ಸಿಗೆ ಯೋಗ ಎಂಬ ವಿಷಯದ ಅಡಿಯಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಹೂಗ್ಲಿಯಲ್ಲಿ 500 ದೋಣಿಗಳಲ್ಲಿ ಯೋಗ ಪ್ರದರ್ಶನಗಳನ್ನು ಮುಖ್ಯ ಕಾರ್ಯಕ್ರಮದ ಜೊತೆಗೆ ಏಕಕಾಲದಲ್ಲಿ ನಡೆಸಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಚರಣೆಗಳ ಸುಗಮ ನಡವಳಿಕೆಯನ್ನು ಖಚಿತಪಡಿಸಿಕೊಳ್ಳಲು ನೂರಾರು ಯೋಗ ಬೋಧಕರನ್ನು ತೊಡಗಿಸಿಕೊಂಡಿದ್ದು, ಆನ್‌ಲೈನ್ ಮತ್ತು ಆಫ್‌ಲೈನ್ ಅಭ್ಯಾಸ ಅವಧಿಗಳು ಈಗಾಗಲೇ ನಡೆಯುತ್ತಿವೆ.ಗಂಗಾ ಮತ್ತು ಸುಂದರ್‌ಬನ್?ಸನ ದಡದಿಂದ ಹಿಡಿದು ಹಳ್ಳಿಗಳು ಮತ್ತು ನಗರದ ಬೀದಿಗಳವರೆಗೆ ಪಶ್ಚಿಮ ಬಂಗಾಳದಾದ್ಯಂತ ಯೋಗ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮಳೆ ಹಾನಿ ಪರಿಹಾರಕ್ಕೆ ಆಸ್ತ್ರಂ ಆಯಪ್ ಬಳಕೆ

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿಗಳು, ಮಳೆ ಹಾನಿ ಹಾಗೂ ಮಳೆ-ಗಾಳಿಗೆ ಬಿದ್ದ ಮರಗಳ ತೆರವಿನಂತಹ ಸಾರ್ವಜನಿಕ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವ ಉದ್ದೇಶದಿಂದ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳು ಆಸ್ತ್ರಂ ಆ?ಯಪ್ ಬಳಕೆಗೆ ಮುಂದಾಗಿದ್ದಾರೆ. ಪಾಲಿಕೆಯ ಸಭಾಂಗಣದಲ್ಲಿ ನಡೆದ ಕಾರ್ಯಾಗಾರದಲ್ಲಿ ಬೆಂಗಳೂರು ಸಂಚಾರ ಪೊಲೀಸ್ ಬಳಸುತ್ತಿರುವ ಅಸ್ತ್ರಂ ಆ?ಯಪ್‌ನ ತಾಂತ್ರಿಕ ತಂಡ ಅಭಿಯಂತರ-ರಿಗೆ ಆ?ಯಪ್ ಕಾರ್ಯವಿಧಾನವನ್ನು ಪ್ರಾತ್ಯಕ್ಷಿಕೆ ಮೂಲಕ ವಿವ-ರಿಸಿತು.

ಸಾರ್ವಜನಿಕರು ಹಾಗೂ ಸಂಚಾರ ಪೊಲೀಸರು ದಾಖಲಿಸುವ ದೂರುಗಳನ್ನು ಆದ-ರಿಸಿ ಸಮಸ್ಯೆಯ ಸ್ಥಳವನ್ನು ಗುರುತಿಸಿ, ತಕ್ಷಣ ದುರಸ್ತಿ ಹಾಗೂ ತೆರವು ಕಾರ್ಯ ಕೈಗೊಳ್ಳುವ ಕುರಿತು ಮಾಹಿತಿ ನೀಡಲಾಯಿತು. ಮುಖ್ಯ ಅಭಿಯಂತರ ಬಸವರಾಜ್ ಕಬಾಡೆ ನೇತೃತ್ವದಲ್ಲಿ ನಡೆದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ತುರ್ತು ಸಂದರ್ಭಗಳಲ್ಲಿ ಹಾಗೂ ಸಾರ್ವಜನಿಕ ದೂರುಗಳ ತ್ವರಿತ ಪರಿಹಾರಕ್ಕೆ ಅಸ್ತ್ರಂ ಆ?ಯಪ್ ಪರಿಣಾಮಕಾರಿ ಸಾಧನವಾಗಿದ್ದು, ಎಲ್ಲಾ ಅಭಿಯಂತರರು ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸುವಂತೆ ಸೂಚನೆ ನೀಡಿದರು. ಆ?ಯಪ್ ಮೂಲಕ ಬರುವ ದೂರುಗಳ ಸ್ಥಳಕ್ಕೆ ಪಾಲಿಕೆ ಅಭಿಯಂತರರು ಮತ್ತು ಅವರ ತಂಡ ಕೂಡಲೇ ಭೇಟಿ ನೀಡಿ ಸಮಸ್ಯೆ ಬಗೆಹರಿಸುವ ಮೂಲಕ ಸಾರ್ವಜನಿಕರಿಗೆ ಶೀಘ್ರ ಸೇವೆ ಒದಗಿಸಲಾಗುವುದು ಎಂದು ಅವರು ತಿಳಿಸಿದರು.

# ವಿಶ್ವಕಪ್‌ನಲ್ಲಿ ಮೆಕ್ಸಿಕೋಗೆ ಐತಿಹಾಸಿಕ ಸಾಧನೆ



ಗ್ವಾಡಲಜಾರಾ: ದಕ್ಷಿಣ ಕೊರಿಯಾ ತಂಡದ ರಕ್ಷಣಾ ವಿಭಾಗದ ತಪ್ಪನ್ನು ಸದುಪಯೋಗಪಡಿಸಿಕೊಂಡ ಮೆಕ್ಸಿಕೋ 1-0 ಅಂತರದ ಗೆಲುವು ಸಾಧಿಸಿ, 2026ರ ಫುಟ್‌ಬಾಲ್ ವಿಶ್ವಕಪ್‌ನಲ್ಲಿ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತವರಿನಲ್ಲಿ ಸಾವಿರಾರು ಅಭಿಮಾನಿಗಳ ಸಮುಖದಲ್ಲಿ ಸತತ ಎರಡನೇ ಗೆಲುವು ದಾಖಲಿಸಿದ ಮೆಕ್ಸಿಕೋ ತಂಡದ ಆಟಗಾರರು ಪಂದ್ಯ ಅಂತ್ಯದಲ್ಲಿ ಮೈದಾನದ ಮಧ್ಯಭಾಗದಲ್ಲಿ ಸಂಭ್ರಮಾಚರಣೆ ನಡೆಸಿ ಅಭಿಮಾನಿಗಳಿಗೆ ಅಭಿನಂದನೆ ಸಲ್ಲಿಸಿದರು.

ರೊಮೊ ಗೋಲು ನಿರ್ಣಾಯಕ

ಪಂದ್ಯದ 50ನೇ ನಿಮಿಷದಲ್ಲಿ ಮೆಕ್ಸಿಕೋದ ಲೂಯಿಸ್ ರೊಮೊ ನಿರ್ಣಾಯಕ ಗೋಲು ಗಳಿಸಿದರು. ದಕ್ಷಿಣ ಕೊರಿಯಾದ ಗೋಲ್‌ಕೀಪರ್ ಕಿಮ್ ಸೆಯುಂಗ್-ಗ್ಯು ಹಾಗೂ ರಕ್ಷಣಾ ಆಟಗಾರ ಲೀ ಗಿ-ಹ್ಯುಕ್ ನಡುವೆ ಉಂಟಾದ ಗೊಂದಲದಿಂದ ಚೆಂಡು ಕೈತಪ್ಪಿ ಬಿದ್ದಾಗ, ರೊಮೊ ಸುಲಭವಾಗಿ ಚೆಂಡನ್ನು ಗೋಲಿನ ಬಲೆಗೆ ತಳ್ಳಿದರು. ಕೊ-ರಿಯಾದ ಹೋರಾಟ ವಿಫಲ ನಂತರ 87ನೇ ನಿಮಿಷದಲ್ಲಿ ದಕ್ಷಿಣ ಕೊರಿಯಾ ಸಮಬಲ ಸಾಧಿಸುವ ಅವಕಾಶ ಪಡೆದಿತ್ತು. ಚೋ ಗುಯೆ-ಸುಂಗ್ ಅವರ ಹೆಡರ್ ಅನ್ನು ಮೆಕ್ಸಿಕೋ ಗೋಲ್‌ಕೀಪರ್ ರೌಲ್ ರಾಂಗೆಲ್ ಅದ್ಭುತವಾಗಿ ತಡೆದರು. ಮರುಕ್ಷಣವೇ ಯಾಂಗ್ ಹ್ಯುನ್-ಜುನ್ ಹೊಡೆದ ರೀಬೌಂಡ್ ಪ್ರಯತ್ನವನ್ನೂ ರಾಂಗೆಲ್ ಕೈಚಾಚಿ ತಡೆದು ತಂಡದ ಗೆಲುವನ್ನು ಖಚಿತಪಡಿಸಿದರು.


ಗುಂಪು ಎ ಯಲ್ಲಿ ಮೆಕ್ಸಿಕೋ ಅಗ್ರಸ್ಥಾನ ಈ ಗೆಲುವಿನೊಂದಿಗೆ ಮೆಕ್ಸಿಕೋ ಎರಡು ಪಂದ್ಯಗಳಿಂದ 6 ಅಂಕಗಳನ್ನು ಪಡೆದು ಗುಂಪು ಎ ಯಲ್ಲಿ ಅಗ್ರಸ್ಥಾನಕ್ಕೇರಿದೆ. ಮೆಕ್ಸಿಕೋ- 6 ಅಂಕ,ದಕ್ಷಿಣ ಕೊರಿಯಾ- 3 ಅಂಕ ಚೆಕ್ ಗಣರಾಜ್ಯ-1 ಅಂಕ ಮತ್ತು ದಕ್ಷಿಣ ಆಫ್ರಿಕಾ ? 1 ಅಂಕ ಗಳಿಸಿದೆ ಇದರಲ್ಲಿ 2 ತಂಡ ಪಂದ್ಯಾವಳಿಯಿಂದ ನಿರ್ಗಮಿಸಲಿದೆ. ಮೆಕ್ಸಿಕೋ ತರಬೇತುದಾರ ಅಗ್ವಿರೆ ಈ ಪಂದ್ಯ ಅತ್ಯುತ್ತಮ ಪಂದ್ಯವಾಗಿರಲಿಲ್ಲ. ಎದುರಾಳಿಗಳು ನಮಗೆ ಹೆಚ್ಚಿನ ಅವಕಾಶ ನೀಡಲಿಲ್ಲ. ಆದ-ರೂ ಅವರ ತಪ್ಪನ್ನು ಬಳಸಿಕೊಂಡು ಗೋಲು ಗಳಿಸಿ ಜಯ ಸಾಧಿಸಿದ್ದೇವೆ. ನಾಕೌಟ್ ಹಂತ ಖಚಿತವಾದುದು ಆಟಗಾರರ ಮೇಲಿದ್ದ ಒತ್ತಡವನ್ನು ಕಡಿಮೆ ಮಾಡಿದೆ ಎಂದು ಹೇಳಿದರು.

ದಕ್ಷಿಣ ಕೊರಿಯಾದ ನಾಯಕ ಸೊನ್ ಮತ್ತೊಮ್ಮೆ ನಿರಾಸೆ ಮೂಡಿಸುವ ಪ್ರದರ್ಶನ ನೀಡಿದರು. ಪಂದ್ಯದ 57ನೇ ನಿಮಿಷದಲ್ಲಿ ಅವರನ್ನು ಬದಲಾಯಿಸಲಾಯಿತು. ವಿಶ್ವಕಪ್‌ನಲ್ಲಿ ದಕ್ಷಿಣ ಕೊರಿಯಾದ ಪರ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರ ಎಂಬ ದಾಖಲೆ ಬೆನ್ನಟ್ಟುತ್ತಿರುವ ಸೊನ್, ಇದುವರೆಗೆ ಮೂರು ವಿಶ್ವಕಪ್‌ಗಳಲ್ಲಿ ಮೂರು ಗೋಲುಗಳನ್ನು ದಾಖಲಿಸಿದ್ದಾರೆ.

45,664 ಪ್ರೇಕ್ಷಕರ ಸಾಮರ್ಥ್ಯದ ಸ್ಟೇಡಿಯಂನಲ್ಲಿ 45,522 ಪ್ರೇಕ್ಷಕರು ಪಂದ್ಯ ವೀಕ್ಷಿಸಿದರು. ಪಂದ್ಯಕ್ಕೂ ಮುನ್ನ ದೇಶದ ವಿವಿಧ ಭಾಗಗಳ ಅಭಿಮಾನಿ ವಲಯಗಳಲ್ಲಿ ಭಾರೀ ಸಂಭ್ರಮ ಕಂಡುಬಂದಿತು. ಇದೇ ವೇಳೆ, ಮೆಕ್ಸಿಕೋದಲ್ಲಿ ಕಾಣೆಯಾಗಿರುವ ಸುಮಾರು 1.3 ಲಕ್ಷ ಜನರ ಕುಟುಂಬಸ್ಥರು ಗ್ವಾಡಲಜಾರಾದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿ ಸರ್ಕಾರದ ಗಮನ ಸೆಳೆದರು.

ಮೆಕ್ಸಿಕೋ ತನ್ನ ಕೊನೆಯ ಗುಂಪು ಪಂದ್ಯದಲ್ಲಿ ಚೆಕ್ ಗಣರಾಜ್ಯವನ್ನು ಎದುರಿಸಲಿದ್ದು, ದಕ್ಷಿಣ ಕೊರಿಯಾ ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ.

# ಭಾರತೀಯ ಮಹಿಳಾ ಕ್ರಿಕೆಟ್ ತಂಡದಿಂದ ಹೊರಬಿದ್ದ ಕನ್ನಡತಿ ಶ್ರೇಯಾಂಕಾ ಪಾಟೀಲ್




ಲೀಡ್: ಮಹಿಳಾ ಟಿ20 ವಿಶ್ವಕಪ್ ಸಂದರ್ಭದಲ್ಲೇ ಭಾರತೀಯ ಮಹಿಳಾ ತಂಡದಲ್ಲಿ ಸ್ಥಾನ ಪಡೆದಿದ್ದ ಕನ್ನಡತಿ ಶ್ರೇಯಾಂಕಾ ಪಾಟೀಲ್ ತಂಡದಿಂದ ಹೊರಬಿದ್ದಿದ್ದಾರೆ. ತಂಡದಲ್ಲಿ ಯಶಸ್ವಿ ಆಫ್-ಸ್ಪಿನ್ನರ್ ಆಗಿದ್ದ ಶ್ರೇಯಾಂಕಾ ಪಾಟೀಲ್ ಪಾದದ ಗಾಯದಿಂದಾಗಿ ನಡೆಯುತ್ತಿರುವ ಮಹಿಳಾ ಟಿ20 ವಿಶ್ವಕಪ್‌ನಿಂದ ಹೊರಗುಳಿದಿದ್ದಾರೆ, ಅವರ ಬದಲಿಯಾಗಿ ಲೆಗ್‌ಸ್ಪಿನ್ನರ್ ಪ್ರೇಮಾ ರಾವತ್ ಅವರನ್ನು ಹೆಸರಿಸಲಾಗಿದೆ.

ನೆದರ್ಲ್ಯಾಂಡ್?ಸ ವಿರುದ್ಧ ಭಾರತ 95 ರನ್‌ಗಳ ಜಯ ಸಾಧಿಸಿದ ಸಂದರ್ಭದಲ್ಲಿ 23 ವರ್ಷದ ಪಾಟೀಲ್ ಗಾಯಗೊಂಡರು. ಪವರ್‌ಪ್ಲೇನ ಅಂತಿಮ ಓವರ್‌ನಲ್ಲಿ ಪಾಟೀಲ್ ಚೆಂಡನ್ನು ನಿಲ್ಲಿಸಲು ಪ್ರಯತ್ನಿಸುವಾಗ ಅವರ ಪಾದವನ್ನು ತಿರುಚಿದಾಗ ಈ ಘಟನೆ ಸಂಭವಿಸಿದೆ. ವೈದ್ಯಕೀಯ ತಂಡ ಮೈದಾನಕ್ಕೆ ಧಾವಿಸುವಾಗ ಅವರು ತಕ್ಷಣ ತಮ್ಮ ಬಲಗಾಲನ್ನು ಹಿಡಿದುಕೊಂಡಿರುವುದು ಕಂಡುಬಂದಿದೆ. ಗಾಯಗೊಂಡ ಪಾದದ ಮೇಲೆ ಯಾವುದೇ ಭಾರವನ್ನು ಹಾಕಲು ಸಾಧ್ಯವಾಗದೆ, ಪಾಟೀಲ್ ಕೇವಲ ಒಂದು ಎಸೆತವನ್ನು ಎಸೆದ ನಂತರ ಸ್ಟ್ರೆಚರ್ ಮೂಲಕ ಹೊರಹಾಕಲಾಯಿತು.ಐಸಿಸಿ ಮಹಿಳಾ ಟಿ20 ವಿಶ್ವಕಪ್ 2026 ರ ಈವೆಂಟ್ ತಾಂತ್ರಿಕ ಸಮಿತಿಯು ಪ್ರೇಮಾ ರಾವತ್ ಅವರನ್ನು ಭಾರತ ತಂಡದಲ್ಲಿ ಶ್ರೇಯಾಂಕಾ ಪಾಟೀಲ್ ಬದಲಿಗೆ ಅನುಮೋದಿಸಿದೆ ಎಂದು ಐಸಿಸಿ ಮಾಧ್ಯಮ ಪ್ರಕಟಣೆ ತಿಳಿಸಿದೆ. 24 ವರ್ಷದ ರಾವತ್ ಹಿರಿಯ ರಾಷ್ಟ್ರೀಯ ತಂಡಕ್ಕೆ ತಮ್ಮ ಮೊದಲ ಕರೆಯನ್ನು ಗಳಿಸಿದ್ದಾರೆ. ಅವರು ಮಹಿಳಾ ಪ್ರೀಮಿಯರ್ ಲೀಗ್‌ನ ಎರಡು ಋತುಗಳಲ್ಲಿ ಆಡಿದ್ದಾರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆರು ಪಂದ್ಯಗಳನ್ನು ಆಡಿದ್ದಾರೆ. ನಾಳೆ ನಾರ್ಥಾಂಪ್ಟನ್‌ನಲ್ಲಿ ನಡೆಯುವ ಮೊದಲ ಟಿ20 ಪಂದ್ಯದಿಂದ ಪ್ರಾರಂಭವಾಗುವ ಆರು ಪಂದ್ಯಗಳ ವೈಟ್-ಬಾಲ್ ಸರಣಿಗಾಗಿ ಇಂಗ್ಲೆಂಡ್ ಪ್ರವಾಸ ಮಾಡಲು ನಿಗದಿಯಾಗಿದ್ದ ಭಾರತ ಎ ತಂಡದ ಭಾಗವಾಗಿದ್ದರು ರಾವತ್. ರೈಸಿಂಗ್ ಸ್ಟಾರ್ಸ್ ಮಹಿಳಾ ಏಷ್ಯಾ ಕಪ್‌ನಲ್ಲೂ ಅವರು ಪ್ರಭಾವ ಬೀರಿದ್ದರು, ಭಾರತ ಎ ಪ್ರಶಸ್ತಿಯನ್ನು ಗೆದ್ದಾಗ 4.27 ರ ಎಕಾನಮಿ ದರದಲ್ಲಿ ಎಂಟು ವಿಕೆಟ್‌ಗಳನ್ನು ಕಬಳಿಸಿದರು.ಇತ್ತೀಚಿನ ವರ್ಷಗಳಲ್ಲಿ ಗಾಯಗಳೊಂದಿಗೆ ಪಾಟೀಲ್ ಅವರ ದುರದೃಷ್ಟಕರ ಓಟವನ್ನು ಈ ಹಿನ್ನಡೆ ಮುಂದುವರಿಸಿದೆ. ಜುಲೈ 2024 ರಲ್ಲಿ ಮು-ರಿದ ಬೆರಳು ಆ ವರ್ಷದ ಟಿ20 ವಿಶ್ವಕಪ್‌ನಿಂದ ಅವರನ್ನು ಹೊರಗುಳಿಸಿತು. ನಂತರ ಅವರು ಮಣಿಕಟ್ಟಿನಲ್ಲಿ ಒತ್ತಡದ ಪ್ರತಿಕ್ರಿಯೆಯನ್ನು ಅನುಭವಿಸುವ ಮೊದಲು ಎರಡೂ ಕಾಲುಗಳಲ್ಲಿ ಮೊಣಕಾಲಿನಲ್ಲಿ ನೋವು ಅನುಭವಿಸಿದರು, ಇದು ಅವರ ವೃತ್ತಿಜೀವನದ ಗಾಯದಿಂದ ಬಳಲುತ್ತಿರುವ ಹಂತದಲ್ಲಿ ಮತ್ತೊಂದು ನಿರಾಶಾದಾಯಕ ಹೊಡೆತವಾಗಿದೆ.

# ಯೋಗ ಎಲ್ಲಾ ಧರ್ಮಗಳಿಗೂ ಒಳಿತು ಮಾಡಿದೆ ; ಗುಟೆರಸ್





ವಿಶ್ವಸಂಸ್ಥೆ: ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸ್ಮರಿಸುತ್ತಾ, ವಿಶ್ವಸಂಸ್ಥೆಯ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಅವರು, ಪ್ರಾಚೀನ ಭಾರತದಲ್ಲಿ ತನ್ನ ಆಳವಾದ ಬೇರುಗಳಿಂದ ಯೋಗವು ನಿಜವಾಗಿಯೂ ಸಾರ್ವತ್ರಿಕವಾಗಿದೆ, ಲಕ್ಷಾಂತರ ಎಲ್ಲಾ ಧರ್ಮಗಳಿಗೆ ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

ವಿಶ್ವ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಆರೋಗ್ಯಕರ ವಯಸ್ಸಿಗೆ ಯೋಗ ಎಂಬ ವಿಷಯದ ಮೇಲೆ 12 ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಿತು.ಐಕಾನಿಕ್ ಗಾಂಧಿ ಪ್ರತಿಮೆಯ ಸಮೀಪದಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯ ಉತ್ತರ ಹುಲ್ಲುಹಾಸುಗಳಲ್ಲಿ ಯೋಗಾಭ್ಯಾಸ ಮಾಡುವವರು, ರಾಜ-ತಾಂತ್ರಿಕರು, ವಿಶ್ವಸಂಸ್ಥೆಯ ಅಧಿಕಾರಿಗಳು, ರಾಜತಾಂತ್ರಿಕ ದಳದ ಸದಸ್ಯರು ಮತ್ತು ಭಾರತೀಯ-ಅಮೇರಿಕನ್ ಸಮುದಾಯವು ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದ-ರಿಂದ ರೋಮಾಂಚಕ ಯೋಗ ಮ್ಯಾಟ್‌ಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿತ್ತು.

ವೇದಿಕೆಯ ಮೇಲೆ, 2028-29 ಅವಧಿಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತವಲ್ಲದ ಸದಸ್ಯರಾಗಿ ಭಾರತದ ಉಮೇದುವಾರಿಕೆಯನ್ನು ಘೋಷಿಸುವ ವಿಶೇಷ ಬ್ಯಾನರ್ ಅನ್ನು ಸಹ 4 2028-29 ಶಾಂತಿ, ಗ್ರಹ, ಪ್ರಗತಿ ಎಂಬ ಸಂದೇಶದೊಂದಿಗೆ ಪ್ರದರ್ಶಿಸಲಾಯಿತು. ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ನೀಡಿದ ಸಂದೇಶದಲ್ಲಿ, ಪ್ರಧಾನ ಕಾರ್ಯದರ್ಶಿ ಗುಟೆರೆಸ್, ನಮ್ಮ ದೇಹ ಮತ್ತು ಪ್ರಪಂಚದೊಂದಿಗೆ ಸಮತೋಲನ, ಸಂಪೂರ್ಣತೆ ಮತ್ತು ಶಾಂತಿಯುತ ಸಂಬಂಧವನ್ನು ಒತ್ತಿಹೇಳುವ ಪ್ರಾಚೀನ ಅಭ್ಯಾಸವನ್ನು ಆಚರಿಸಲು ನಾವು ಒಟ್ಟಾಗಿ ಬರುತ್ತೇವೆ ಎಂದು ಹೇಳಿದರು.

ಪ್ರಾಚೀನ ಭಾರತದಲ್ಲಿ ತನ್ನ ಆಳವಾದ ಬೇರುಗಳಿಂದ, ಯೋಗವು ನಿಜವಾಗಿಯೂ ಸಾರ್ವತ್ರಿಕವಾಗಿದೆ, ಲಕ್ಷಾಂತರ ಎಲ್ಲಾ ನಂಬಿಕೆಗಳು ಮತ್ತು ಎಲ್ಲಾ ಸಂಸ್ಕೃತಿಗಳು ಶಾಂತತೆಯನ್ನು ಕಂಡುಕೊಳ್ಳಲು, ಶಕ್ತಿಯನ್ನು ಬೆಳೆಸಲು ಮತ್ತು ಉದ್ದೇಶಪೂರ್ವಕವಾಗಿ ಬದುಕಲು ಸಹಾಯ ಮಾಡುತ್ತದೆ ಎಂದು ವಿಶ್ವಸಂಸ್ಥೆಯ ಮುಖ್ಯಸ್ಥರು ಹೇಳಿದರು. ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಈ ವರ್ಷದ ಧ್ಯೇಯವಾಕ್ಯವನ್ನು ಒತ್ತಿಹೇಳುತ್ತಾ, ಇದು ಪ್ರಪಂಚದಾದ್ಯಂತ ಜನಸಂಖ್ಯೆಯು ವಯಸ್ಸಾದಂತೆ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮ, ಚಲನಶೀಲತೆ ಮತ್ತು ಘನತೆಯ ಪ್ರಮುಖ ಪ್ರಾಮುಖ್ಯತೆಯನ್ನು ಹೇಳುತ್ತದೆ ಎಂದು ಗುಟೆರೆಸ್ ಹೇಳಿದರು.

ಯೋಗವು ನಮಗೆ ನಮ್ಮ ಬಗ್ಗೆ, ನಮ್ಮ ಗ್ರಹಕ್ಕಾಗಿ ಮತ್ತು ಪರಸ್ಪರ ಸಾವಧಾನತೆ, ಗೌರವ ಮತ್ತು ಕಾಳಜಿಯನ್ನು ಕಲಿಸುತ್ತದೆ. ಈ ಅಂತರರಾಷ್ಟ್ರೀಯ ದಿನದಂದು, ನಮ್ಮ ಮಾನವ ಕುಟುಂಬದ ಹಿರಿಯ ಸದಸ್ಯ-ರಿಗೆ ಆ ಕಾಳಜಿಯನ್ನು ವಿಸ್ತರಿಸೋಣ ಮತ್ತು ಪ್ರತಿ ಪೀಳಿಗೆಯೂ ಆರೋಗ್ಯಕರ ಜೀವನವನ್ನು ನಡೆಸಬಹುದಾದ ಜಗತ್ತನ್ನು ನಿರ್ಮಿಸೋಣ ಎಂದು ಗುಟೆರೆಸ್ ತಮ್ಮ ಸಂದೇಶವನ್ನು ನಮಸ್ತೆ

# ಶಾಲಾ ಕಾರ್ಯಕ್ರಮದಲ್ಲಿ ಪಾಕ್ ಹಾಡು : ಪ್ರಾಂಶುಪಾಲ, ಇಬ್ಬರು ಶಿಕ್ಷಕರ ವಿರುದ್ಧ ಎಫ್‌ಐಆರ್




ಜಲಾ: ಮಹಾರಾಷ್ಟ್ರದ ಜಲ್ನಾ ಜಿಲ್ಲೆಯಲ್ಲಿ ಶಾಲಾ ಕಾರ್ಯಕ್ರಮವೊಂದರಲ್ಲಿ ಪಾಕಿಸ್ತಾನಿ ಹಾಡನ್ನು ಪ್ರದರ್ಶಿಸಿದ ಆರೋಪದ ಮೇಲೆ ಪ್ರಾಂಶುಪಾಲರು ಮತ್ತು ಇಬ್ಬರು ಶಿಕ್ಷಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪರ್ತೂರ್ ಪೊಲೀಸರು ಪ್ರಾಂಶುಪಾಲ ವಾಜಿಯೊಡ್ಡೀನ್ ಸಿದ್ದಿಕಿ ಮತ್ತು ಇತರ ಇಬ್ಬರ ವಿರುದ್ಧ ಬಿಎನ್‌ಎಸ್ ಸೆಕ್ಷನ್ 152 (ಭಾರತದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಗೆ ಅಪಾಯವನ್ನುಂಟುಮಾಡುವ ಕೃತ್ಯಗಳು), 196 (ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು), 197 (ರಾಷ್ಟ್ರೀಯ ಏಕೀಕರಣದ ಮೇಲೆ ಪರಿಣಾಮ ಬೀರುವ ತಪ್ಪು ಮಾಹಿತಿಯನ್ನು ಹರಡುವುದು) ಮತ್ತು 353 (ಸಾರ್ವಜನಿಕ ಆತಂಕಕ್ಕೆ ಕಾರಣವಾಗುವ ಸುಳ್ಳು ಮಾಹಿತಿಯನ್ನು ಪ್ರಸಾರ ಮಾಡುವುದು) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಈ ಹಿಂದೆ, ಮಾರ್ಚ್ 2025 ರಲ್ಲಿ ನಡೆದ ವಾರ್ಷಿಕ ಸಭೆಯ ಸಮಯದಲ್ಲಿ ಪಾರ್ತೂರ್‌ನಲ್ಲಿರುವ ಕಿಡ್?ಸ ವರ್ಲ್?ಡ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳು ಪಾಕಿಸ್ತಾನಿ ಹಾಡಿಗೆ ನೃತ್ಯ ಮಾಡಿದ್ದಾರೆ ಎಂದು ಕೆಲವು ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು ಆರೋಪಿಸಿದ್ದವು ಮತ್ತು ಪ್ರದರ್ಶನದ ಸಮಯದಲ್ಲಿ ಪಾಕಿಸ್ತಾನಿ ಉಗ್ರಗಾಮಿ ಮುಮ್ತಾಜ್ ಖಾದ್ರಿ ಅವರ ಛಾಯಾಚಿತ್ರವನ್ನು ಪ್ರದರ್ಶಿಸಲಾಗಿತ್ತು.

ಸ್ಥಳೀಯ ಬಿಜೆಪಿ ಶಾಸಕ ಬಬನ್‌ರಾವ್ ಲೋಣಿಕರ್ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸುವುದು ಸೇ-ರಿದಂತೆ ಶಾಲಾ ಆಡಳಿತದ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.ಶಾಲಾ ಆಡಳಿತ ಮಂಡಳಿ ಆರೋಪಗಳನ್ನು ಬಲವಾಗಿ ನಿರಾಕರಿಸಿದೆ. ಕಾರ್ಯಕ್ರಮದಲ್ಲಿ ಬಳಸಲಾದ ಸಂಗೀತವು ಜನಪ್ರಿಯ ಟರ್ಕಿಶ್ ಟಿವಿ ಧಾರಾವಾಹಿ ಎರ್ತುಗ್ರುಲ್ ಘಾಜಿ ಯದ್ದಾಗಿದ್ದು, ಅದು ಪಾಕಿಸ್ತಾನಿ ಹಾಡಲ್ಲ ಎಂದು ಪ್ರಾಂಶುಪಾಲ ಸಿದ್ದಿಕಿ ಹೇಳಿದರು.ಪ್ರದರ್ಶನದ ಸಮಯದಲ್ಲಿ ತೋರಿಸಲಾದ ಚಿತ್ರವು ಎರ್ತುಗ್ರುಲ್ ಘಾಜಿ ಯ ನಟನದ್ದಾಗಿತ್ತು.

ಕೆಲವು ವ್ಯಕ್ತಿಗಳು ದೃಶ್ಯಗಳನ್ನು ತಿರುಚಿ ಸಾಮಾಜಿಕ ಮಾಧ್ಯಮದಲ್ಲಿ ದಾ-ರಿತಪ್ಪಿಸುವ ವಿಷಯವನ್ನು ಪ್ರಸಾರ ಮಾಡಿದ್ದಾರೆ ಎಂದು ಅವರು ವರದಿಗಾರರಿಗೆ ತಿಳಿಸಿದರು. ವಾಸ್ತವಗಳನ್ನು ಖಚಿತಪಡಿಸಿಕೊಳ್ಳಲು ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

# ಬೆಳಿಗ್ಗೆ ಏಳುವುದು ಯಾವ ಸಮಯ


ನಾವು ಪ್ರತಿದಿನ ಬೆಳಿಗ್ಗೆ ಯಾವಾಗ ಏಳಬೇಕು? ಇದೊಂದು ಸಹಜ ಪ್ರಶ್ನೆ. ಮುಖ್ಯವಾಗಿ ಸೂರ್ಯೋದಯಕ್ಕೆ ಮೊದಲು ನಾವು ಏಳಬೇಕು. ಈ ನಿಯಮವನ್ನು ಹಾಕಿಕೊಂಡು ಅದನ್ನು ತಪ್ಪದೇ ಪಾಲಿಸಬೇಕು. ಮನುಸ್ಮೃತಿಯಲ್ಲಿ ಈ ರೀತಿ ಹೇಳಿದೆ ನೋಡಿ, ಬ್ರಾಹ್ಮೇ ಮುಹೂರ್ತೇ ಯಾ ನಿದ್ರಾಸಾ ಪುಣ್ಯಕ್ಷಯಕಾರಿಣೀ । ಬ್ರಾಹ್ಮೇ ಮುಹೂರ್ತೇ ಬುಧ್ಯೇತ ಧರ್ಮಾರ್ಥೌ ಚಾನುಚಿಂತಯೇತ್ ॥
ಇದರ ಅರ್ಥ-- ಬ್ರಾಹ್ಮೀ ಮುಹೂರ್ತದಲ್ಲಿ ನಿದ್ದೆ ಮಾಡುವುದರಿಂದ ನಾವು ಗಳಿಸಿದ ಪುಣ್ಯ ನಾಶವಾಗುತ್ತದೆ. ಆದ್ದರಿಂದ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಧರ್ಮಾರ್ಥಗಳನ್ನು ಚಿಂತಿಸಬೇಕು. ಬ್ರಾಹ್ಮೀ ಮುಹೂರ್ತವೆಂದರೆ ಸೂರ್ಯೋದಯಕ್ಕಿಂತ ಒಂದು ಯಾಮ ಮೊದಲಿನ ಅವಧಿ. ಒಂದು ದಿನಕ್ಕೆ ಎಂಟು ಯಾಮಗಳು. ಒಂದು ಯಾಮಕ್ಕೆ ಮೂರು ತಾಸುಗಳು. ಆದ್ದರಿಂದ ಬ್ರಾಹ್ಮೀ ಮುಹೂರ್ತವೆಂದರೆ ಸೂರ್ಯೋದಯಕ್ಕಿಂತ ಮೂರು ತಾಸು ಮೊದಲಿನ ಅವಧಿ. ಅಂದರೆ ನಸುಕಿನ ಸುಮಾರು ನಾಲ್ಕು ಗಂಟೆಯಿಂದ ಆರು ಗಂಟೆಯ ಒಳಗಿನ ಅವಧಿ. ಅದರಲ್ಲೂ ಪ್ರಶಸ್ತವಾದ ಕಾಲ ನಸುಕಿನ ನಾಲ್ಕು ಗಂಟೆಯ ಸಮಯ. ಆಗ ಏಳಬೇಕು ಎನ್ನುತ್ತದೆ. ಮನುಸ್ಮೃತಿ. ಯಾಕೆಂದರೆ ಸ್ಪಷ್ಟವಾಗಿ ಬ್ರಾಹ್ಮೀ ಮುಹೂರ್ತವೆಂದರೆ ರಾತ್ರಿಯ ಕೊನೆಯ ಯಾಮದ ಮೊದಲ ಅರ್ಧ ಭಾಗ ಎಂದು ಹೇಳಲಾಗಿದೆ.

ಈ ಶ್ಲೋಕ ನೋಡಿ.
ಇದು ಕಾಶೀಖಂಡ ಎಂಬ ಗ್ರಂಥ-'ದಲ್ಲಿ ಬರುತ್ತದೆ. ಬ್ರಾಹ್ಮ ಮುಹೂರ್ತಃ ರಾತ್ರೇಃ ಪಶ್ಚಿಮೋ ಯಾಮಃ ರಜನೀ? ಪ್ರಾತರ್ಯಾಮಾರ್ಧಃ ಬ್ರಾಹ್ಮಃ ಸಮಯ ಉಚ್ಯತೇ ಇತಿ ಕಾಶೀಖಂಡಃ ಅಂದರೆ ಏಳಲು ಪ್ರಶಸ್ತ ಕಾಲ ನಸುಕಿನ ಮೂರರಿಂದ



ನಾಲ್ಕೂವರೆಯ ನಡುವಿನ ಅವಧಿ. ಅದು ಬ್ರಾಹ್ಮೀ ಮುಹೂರ್ತ. ಬೇಗ ಮಲಗಿ ಬೇಗ ಏಳು ಎಂಬ ಒಂದು ಗಾದೆಯಮಾತಿದೆ. ಇದು ಆರೋಗ್ಯಕ್ಕೆ ಒಳ್ಳೆಯದು ಎಂದು ಆ ಮಾತಿನ ಅರ್ಥ. ಮುಂಜಾವಿನ ಸಮಯ ಆರೋಗ್ಯಕ್ಕೆ ತುಂಬ ಒಳ್ಳೆಯದು.
ಆಗ ವಾತಾವರಣದಲ್ಲಿ ವಿಪುಲವಾಗಿ ಶುದ್ಧ ಸಂಸ್ಕರಿಸಲ್ಪಟ್ಟ ಹವಾಮಾನವಿರುತ್ತದೆ. ಅದರಲ್ಲಿ ಪ್ರಾಣವಾಯು ತುಂಬ ಶುದ್ಧವಾಗಿರುತ್ತದೆ. ನಿಸರ್ಗವೂ ಪ್ರಶಾಂತ ಮತ್ತು ರಮಣೀಯವಾಗಿರುತ್ತದೆ. ತಂಪಾಗಿರುತ್ತದೆ.

ಮಂದ ಮಾರುತ ಬೀಸುತ್ತಾ ಅದೇ ಆಗ ಅರಳುವ ಹೂವುಗಳ ಪರಿಮಳವನ್ನು ಎಲ್ಲೆಡೆ ಪಸರಿಸುತ್ತ ಧಾವಿಸುತ್ತದೆ. ಅಂತಹ ವಾತಾವರಣದಲ್ಲಿ ನಮ್ಮ ಶರೀರ ಮತ್ತು ಮನಸ್ಸು ಎರಡೂ ಮುದಗೊಂಡು ಆ ದಿನದ ಚಟುವಟಿಕೆಗಳಿಗೆ ಲವಲವಿಕೆಯಿಂದ ಸಿದ್ಧವಾಗುತ್ತವೆ. ಅಲ್ಲದೆ ಬೇಗ ಎದ್ದಾಗ ನಮಗೆ ಸಾಕಷ್ಟು ಸಮಯ ದೊರೆತು, ನಮ್ಮ ಮುಂಜಾನೆಯ ನೈಮಿತ್ತಿಕ ಕಾರ್ಯಗಳು, ಶೌಚ ಇತ್ಯಾದಿಗಳಿಗೆ ಸಾಕಷ್ಟು ಸಮಯ ಸಿಗುತ್ತದೆ. ಗಡಿಬಿಡಿಯಿಂದ ಮಾಡಿ ಮುಗಿಸಿ ಮಾನಸಿಕವಾಗಿ ಅಶೌಚವಾಗಿಯೇ ಇದ್ದ ಭಾವನೆ ಇರುವುದಿಲ್ಲ. ಮನಸ್ಸು ನೆಮ್ಮದಿಯಿಂದ ಇರುತ್ತದೆ. ಆದ್ದರಿಂದ ಬೆಳಿಗ್ಗೆ ಕನಿಷ್ಠ ಐದು ಗಂಟೆಗಾದರೂ ಏಳುವ ಪ್ರಯತ್ನ ಮಾಡೋಣ. ಕೆಲಸಮಯದ ನಂತರ ಏಳುವ ಸಮಯ ಐದರಿಂದ ಹಿಂದಕ್ಕೆ ಸ್ವಲ್ಪ ಸ್ವಲ್ಪವಾಗಿ ಸರಿಸುತ್ತ ನಾಲ್ಕು ಅಥವಾ



ನಾಲ್ಕುವರೆಗೆ ಏಳುವ ಅಭ್ಯಾಸ ಮಾಡೋಣ. ಎದ್ದ ಕೂಡಲೇ ಎರಡು ಅಂಗೈಗಳನ್ನು ಒಂದಕ್ಕೊಂದು ಉಜ್ಜಿಕೊಂಡು ಆಮೇಲೆ ಅವುಗಳನ್ನು ನೋಡುತ್ತಾ ಈ ಶ್ಲೋಕವನ್ನು ಹೇಳಬೇಕು.

ಕರಾಗ್ರೇ ವಸತಿರ್ಲಕ್ಷ್ಮೀ ಕರಮಧ್ಯೇ ಸರಸ್ವತೀ ಕರಮೂಲೇ ಸದಾ ಗೌರೀ ಪ್ರಭಾತೇ ಕರದರ್ಶನಮ್ ಹೀಗೆ ಅಂಗೈಗಳನ್ನು ಉಜ್ಜುವುದರಿಂದ ಶರೀರದಲ್ಲಿಯ ನರಗಳು ಬಿಸಿಯಾಗಿ ರಕ್ತ ಸಂಚಾರ ಸರಾಗವಾಗುತ್ತದೆ. ಅಲ್ಲದೆ ಕತ್ತಲೆಯಲ್ಲಿಯೇ ನಿಸರ್ಗದಲ್ಲಿ ದೂರದ ವರೆಗೆ ಕಣ್ಣುಗಳ ದೃಷ್ಟಿಯನ್ನು ಕೆಲ ನಿಮಿಷಗಳ ವರೆಗೆ ಹಾಯಿಸಬೇಕು. ಅಂ-ದರೆ ದೂರದ ವರೆಗೆ ಕತ್ತಲೆಯಲ್ಲಿಯೇ ನೋಡುತ್ತಿರಬೇಕು. ಕಣ್ಣುಗಳ ಆರೋಗ್ಯಕ್ಕೆ ಇದು ತುಂಬ ಒಳ್ಳೆಯದು. ಮುಂಜಾವಿನ ವಾಯುವಿಹಾರವೂ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಒಳ್ಳೆಯದು. ಇವೆಲ್ಲವನ್ನು ಮಾಡಲು ವಿಶೇಷ ಶಕ್ತಿಯನ್ನಾಗಲಿ ಶ್ರಮವನ್ನಾಗಲೀ ವ್ಯಯಿಸಬೇಕಿಲ್ಲ. ಕೇವಲ ಮಾನಸಿಕ ಸಿದ್ಧತೆಯಿದ್ದರಾಯಿತು. ಬೇಗ ಏಳಲು ರಾತ್ರೆ ಯಾವಾಗ ಮಲಗಬೇಕು ಸಾಮಾನ್ಯವಾಗಿ ನಮಗೆ ಆರರಿಂದ ಎಂಟು ತಾಸಿನ ನಿದ್ದೆ ಬೇಕು. ಅದಕ್ಕೆ ಅನುಸಾರವಾಗಿ ರಾತ್ರೆ ಸಾಮಾನ್ಯವಾಗಿ ಒಂಬತ್ತರಿಂದ ಹತ್ತು ಗಂಟೆಯ ಒಳಗೆ ಮಲಗಬಹುದು. ಸುಸ್ಥಿರ ಆರೋಗ್ಯೇನ ಜೀವಂತು ಶರದಾಮ್ ಶತಾಮ್ ಎಂಬ ಮಾತಿನಂತೆ ಬೇಗ ಮಲಗಿ ಬೇಗ ಏಳುವ ಅಭ್ಯಾಸ ಮಾಡೋಣ. ಮನೆಯಲ್ಲಿಯ ಮಕ್ಕಳಿಗೂ ಇದರ ಅಭ್ಯಾಸವಾಗುವಂತೆ ನೋಡಿಕೊಳ್ಳೋಣ





ಪ್ರಶಾಂತಭಟ್ ಕೋಟೇಶ್ವರ

# ಬಬಂ ಬಂ ಬಬಂ..ಬಬಂ ಬಂ ಬಬಂ... ಗೀತೆಯ ಹಿನ್ನೆಲೆ

ಬಬಂ ಬಂ ಬಬಂ..ಬಬಂ ಬಂ ಬಬಂ ಎಂಬ ಹಾಡನ್ನು ಐಪಿಎಲ್ ಪಂದ್ಯಗಳ ಫೈನಲ್ ನ ಮಧ್ಯಂತರದ ವಿರಾಮದಲ್ಲಿ ಖ್ಯಾತ ಗಾಯಕ ಕೈಲಾಶ್ ಖೇರ್ ಹಾಡಿದರು. ಇದನ್ನು ದಕ್ಷಿಣ ಭಾರತದ ನಾವು ಕೇಳಿದಾಗ ಇದೊಂದು ರ್ಯಾಪ್ ಸಂಗೀತದ ಹಾಡು ಎಂದು ನಾವು ಭಾವಿಸಿದರೆ ಅದು ಖಂಡಿತ ತಪ್ಪು. ಇದೊಂದು ಶುದ್ಧವಾದ ಜಾನಪದ ಗೀತೆ. ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ ಹಾಗೂ ಉತ್ತರಾ ಖಂಡ ರಾಜ್ಯಗಳಲ್ಲಿ ಬೈರಾಗಿಗಳು ಈ ಜಾನಪದ ಗೀತೆಯನ್ನು ಹೇಳುತ್ತಾ ಶಿವನನ್ನು ಭೋಲಾ ಶಂಕರ, ಬಾಬಾ, ಜಗನ್ನಾಥ್ ಹೀಗೆ ವಿವಿಧ ಹೆಸರುಗಳಿಂದ ಕರೆಯುತ್ತಾ ಆತನ ಗುಣಗಾನ ಮಾಡುತ್ತಾರೆ.

ಉತ್ತರ ಭಾರತೀಯರ ಪ್ರಕಾರ ಶಿವನು ಉತ್ತರಾ ಖಂಡ ರಾಜ್ಯಕ್ಕೆ ಸೇರಿದ್ದು ಮಾತೆ ಪಾರ್ವತಿ ದೇವಿಯು ಹಿಮಾಚಲ ಪ್ರದೇಶಕ್ಕೆ ಸೇರಿದವಳು. ಆಕೆಯ ತಂದೆ ಹಿಮವಂತ. ತಾಯಿ ಮೇನಾದೇವಿ ಆಕೆಗೆ ನೂರು ಜನ ಸಹೋದರರು. ದುಷ್ಟರನ್ನು ಶಿಕ್ಷಿಸಲು ಮಾತೆ ಪಾರ್ವತಿಯು ಈ ಭೂಮಿಯ ಮೇಲೆ ಅವತರಿಸಬೇಕಾಗಿ-ತ್ತು ಆದ್ದರಿಂದ ದೇವತೆಗಳು ಮೇನಾ ದೇವಿ ಹಾಗೂ ಹಿಮವಂತನಿಗೆ ಶಕ್ತಿ ದೇವತೆಯನ್ನು ಪ್ರಾರ್ಥಿಸಲು ಕೇಳಿಕೊಂಡರು.
ದೇವಿಯ ಆಶೀರ್ವಾದದಿಂದ ಹುಟ್ಟಿದ ಪಾರ್ವತಿ ದೇವಿಯು ಮುಂದೆ ಬೆಳೆದು ದೊಡ್ಡವಳಾದ ನಂತರ ಶಿವನನ್ನೇ ವಿವಾಹವಾಗಬೇಕೆಂದು ಇಚ್ಛೆಸಿದಳು.ಇದಕ್ಕೆ ಎಲ್ಲ ದೇವಾದಿ ದೇವತೆಗಳ ಆಗ್ರಹವು ಕೂಡ ಕೂಡಿತ್ತು. ಈಗಾಗಲೇ ಸತಿ ದೇವಿಯನ್ನು ಕಳೆದುಕೊಂಡ ಶಿವ ದುಃಖ ತಪ್ತನಾಗಿದ್ದನು. ಉಗ್ರ ವೈರಾಗ್ಯವನ್ನು ಹೊಂದಿ ಕಠಿಣ ತಪಸ್ಸಿನಲ್ಲಿ ಮುಳುಗಿದ್ದನು. ಆತನ ತಪಸ್ಸನ್ನು ಭಂಗ ಮಾಡುವ ಧೈರ್ಯ ಹಾಗೂ ಶಕ್ತಿ ಯಾರೊಬ್ಬರಿಗೂ ಇರಲಿಲ್ಲ ಆದರೆ ಲೋಕ ಕಲ್ಯಾಣದ ಕಾರಣವನ್ನು ಮುಂದೊಡ್ಡಿ ಈ ಕೆಲಸವನ್ನು ಮನ್ಮಥ ಹಾಗೂ ಆತನ ಪತ್ನಿ ರತಿ ದೇವಿ ಒಪ್ಪಿಕೊಂಡರು. ಪಾರ್ವತಿ ದೇವಿಯು ಶಿವನು ಒಡ್ಡಿದ ಎಲ್ಲ ಪರೀಕ್ಷೆಗಳನ್ನು ಎದುರಿಸಿ ಆತನ ಮನವನ್ನು ಗೆದ್ದಳು. ಅಂತಿಮವಾಗಿ ಶಿವನು ಪಾರ್ವತಿಯನ್ನು ಮದುವೆಯಾಗಲು ಒಪ್ಪಿಕೊಂಡನು. ಹಿಮಾಚಲ ಪ್ರದೇಶದ ಪಾರ್ವತಿಯ ತಂದೆಯ ಮನೆಗೆ ಉತ್ತರಾಖಂಡದ ಭೈರಾಗಿ ಶಿವನು ತನ್ನ ಗಣಗಳನ್ನು ಒಡಗೂಡಿ ಪಾರ್ವತಿಯನ್ನು ಮದುವೆಯಾಗಲು ಮದುವೆಯ ದಿಬ್ಬಣದೊಂದಿಗೆ ಬಂದನು.ವಿವಾಹದ ಎಲ್ಲಾ ವಿಧಿ ವಿಧಾನಗಳನ್ನು ಪೂರೈಸಿದ





ನಂತರ ವಿವಾಹ ಮಹೋತ್ಸವವನ್ನು ನಡೆಸಿಕೊಟ್ಟ ಬ್ರಾಹ್ಮಣ ದಕ್ಷಿಣೆಯನ್ನು ಕೇಳಿದ. ನಸು ನಗುತ್ತಾ ಬೈರಾಗಿ ಶಿವ ದಕ್ಷಿಣೆಯಾಗಿ ತನ್ನ ಜೋಳಿಗೆಯಿಂದ ಮೂರು ಮುಷ್ಟಿ ಬೂದಿಯನ್ನು ನೀಡಿದ (ಭಾನ್). ಆ ಬೂದಿಯ ಮೊದಲ ಮುಷ್ಟಿಯಲ್ಲಿ ಉತ್ತರಾಖಂಡ ರಾಜ್ಯವನ್ನು ಎರಡನೇ ಮುಷ್ಟಿ ಬೂದಿಯಲ್ಲಿ 4 ವೇದಗಳನ್ನು ಹಾಗೂ ಮೂರನೇ ಮುಷ್ಟಿ ಬೂದಿಯಲ್ಲಿ ಈ ಜಗತ್ತಿನ ಸರ್ವ ಸಂಪತ್ತನ್ನು ಆ ಭೈರಾಗಿಗೆ ಆತ ನೀಡಿದ್ದ.

ಇದರ ಅರಿವನ್ನು ಹೊಂದಿರದ ಬ್ರಾಹ್ಮಣನು ಭೈರಾಗಿಯ ಮದುವೆ ಮಾಡಿಸಿದ್ದಕ್ಕೆ ಬೂದಿಯೇ ದೊರೆಯುವುದು ಎಂದು ಬೇಸರ ವ್ಯಕ್ತಪಡಿಸುತ್ತಾ ತನ್ನ ಮನೆಗೆ ಹೊರಟ. ದಾರಿಯಲ್ಲಿ ಆತ ಮನೆಗೆ ಬೂದಿಯನ್ನು ಕೊಂಡೊಯ್ದರೆ ನನ್ನ ಪತ್ನಿ ನನ್ನನ್ನು ಹೀಯಾಳಿಸಿ ಮಾತನಾಡಬಹುದು, ಕೊಂಕು ನಡೆಯಬಹುದು ಎಂಬ ಭಯದಿಂದ ಆ ಬೂದಿಯನ್ನು ಗಂಗೆಯಲ್ಲಿ ಚೆಲ್ಲಿದ.
ಆದರೆ ಏನು ಆಶ್ಚರ್ಯ! ಹಾಗೆ ಚೆಲ್ಲಿದ ಬೂದಿಯು ಚಿನ್ನ, ವಜ್ರಗಳಾಗಿ ನೀರಿನಲ್ಲಿ ಕಾಣಿಸಿತು. ಕೂಡಲೇ ಬ್ರಾಹ್ಮಣನು ಆ ಚಿನ್ನ, ವಜ್ರ, ಮುತ್ತು, ಹವಳಗಳನ್ನು ಹಿಡಿಯಲು ಹೋದಾಗ ಆತನಿಗೆ ಯಾವುದೂ ಸಿಕ್ಕದೆ ಹೋಯಿತು. ಅದೆಷ್ಟೇ ಆತ ಪ್ರಯತ್ನಿಸಿದರೂ ಆತನ ಪ್ರಯತ್ನ ಫಲಪ್ರದವಾಗಲಿಲ್ಲ. ಅಂತಿಮವಾಗಿ ಆತನ ಕೈ ಖಾಲಿಯಾಗಿಯೇ ಉಳಿಯಿತು

ಸ್ನೇಹಿತರೆ! ಭಗವಾನ್ ಶಿವನ ಸನ್ನಿಧಿಯ ಬೂದಿಯಲ್ಲಿ ಕೂಡ ಚಿನ್ನದ ಅಂಶವಿದೆ ಅದನ್ನು ತಿರಸ್ಕರಿಸಕೂಡದು ಎಂಬುದನ್ನು ಈ ಜನಪದ ಹಾಡಿನ ಮೂಲಕ ಅವರು ವಿಷದ ಪಡಿಸುತ್ತಾರೆ. ಇದಲ್ವೇ ದೈವ ಮಹಿಮೆ ಪ್ರಾಕೃತಿಕವಾಗಿ ದೊರೆತದ್ದು ಸಂಸ್ಕಾರವೆಂಬ ಅಗ್ನಿಕುಂಡದಲ್ಲಿ ಹಾಯ್ದು ಹೋದಾಗ ಸಂಸ್ಕೃತಿ ಬೆಳಗುತ್ತದೆ
ಕುಟ್ಟಿದ ಭತ್ತದಿಂದ ಹೊರಬರುವ ಅಕ್ಕಿ ನೀರು ಹಾಗೂ ಬೆಂಕಿಯ ಸಂಪರ್ಕದಲ್ಲಿ ಅನ್ನವಾಗಿ ಉಣ್ಣಲು ಯೋಗ್ಯವೆನಿಸುತ್ತದೆ
ಅದೇ ಅನ್ನವನ್ನು ದೇವರಿಗೆ ಎಡೆ ಮಾಡಿದಾಗ ಅದು ಪ್ರಸಾದವಾಗುತ್ತದೆ... ಆ ಪ್ರಸಾದವನ್ನು ಸೇವಿಸಿದ ಭಕ್ತರ ಹಸಿವನ್ನು ಅದು ನೀಗಿಸುತ್ತದೆ. 'ತೇನ ವಿನಾ ತೃಣ ಮಪಿ ನಾ ಚಲತಿ' ಎಂಬ ವಾಣಿಯನ್ನು ನೆನಪಿನಲ್ಲಿ ಇಟ್ಟುಕೊಂಡು ನಮಗೆ ಬದುಕಿನಲ್ಲಿ ದೊರೆತದ್ದನ್ನು ಮಹಾಪ್ರಸಾದ ಎಂದು ಭಾವಿಸಿ ಇರುವುದರಲ್ಲಿಯೇ ಸಂತೃಪ್ತಿಯನ್ನು ಕಾಣಬೇಕು. ದೇವರು, ದೈವ, ಭಕ್ತಿ ಎಂಬುದು ನಮ್ಮನ್ನು ಸದಾ ಕಾಪಾಡುವ ಸಕಾರಾತ್ಮಕ ಶಕ್ತಿಗಳು. ಅವುಗಳ ಮೇಲೆ ಸದಾ ನಂಬಿಕೆ ಇರಲಿ... ನಂಬಿಕೆಯ ಬಲ ಬಲು ದೊಡ್ಡದು. ನಂಬಿಕೆಟ್ಟವರಿಲ್ಲವೋ ಎಂಬ ಪದ್ಯವನ್ನು ಕೂಡ ಕೇಳಿರಬಹುದು ನಾವು ನಂಬಿದ ದೈವ ಎಂದೂ ನಮ್ಮನ್ನು ಕೈಬಿಡುವುದಿಲ್ಲ. ನೋಡಿದಿರಾ ಸ್ನೇಹಿತರೆ! ಪ್ರತಿಯೊಂದು ವಿಷಯವು ಮತ್ತೊಂದು ಸಂಗತಿಗೆ ತಳುಕೆ ಹಾಕಿಕೊಂಡಿರುತ್ತದೆ. ಒಂದು ಹಾಡಿನ ಮೂಲವನ್ನು ಅರಿಯಲು ಹೋದಾಗ ಒಂದು ಇಡೀ ಸಂಸ್ಕೃತಿಯ ತಾತ್ವಿಕತೆಯ ನೆಲೆಗಟ್ಟು ನಮಗೆ ದೊರೆಯಿತು.

ನಮ್ಮ ಭಾರತದ ಆತ್ಮ ಆದ-'ಧ್ಯಾತ್ಮದ ಆತ್ಮ...ಅದೆಷ್ಟೇ ಆಧುನಿಕತೆ ನಮ್ಮನ್ನು ಆಳಿದರೂ ನಮ್ಮ ಸನಾತನ ಸಂಸ್ಕೃತಿಯ ಅರಿವು ನಮಗೆ ಇರಬೇಕು. ಬೇರುಗಳು ಗಟ್ಟಿಯಾದಷ್ಟು ಮರದಲ್ಲಿ ಸತ್ವ ಹೆಚ್ಚಾಗುತ್ತದೆ ಅಲ್ವೇ ಸ್ನೇಹಿತರೆ??



ವೀಣಾ ಹೇಮಂತ್ ಗೌಡ ಪಾಟೀಲ್

1ನೇ ಪುಟದಿಂದ....

## ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪಾರದರ್ಶಕವಾಗಿರಲಿ ಅಧಿಕಾರಗಳಿಗೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಸೂಚನೆ

ಇವುಗಳಲ್ಲಿ ಸದ್ಯ 402 ಕ್ಲಬ್‌ಗಳು ಸಕ್ರಿಯವಾಗಿದ್ದು, ಇನ್ನುಳಿದ 134 ಕ್ಲಬ್‌ಗಳನ್ನು ಶೀಘ್ರದಲ್ಲೇ ಸಕ್ರಿಯಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು.

**ಸಭೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಯ ವಿವಿಧ ಹಂತಗಳ ವೇಳಾಪಟ್ಟಿ:**

ಜೂನ್ 20 ರಿಂದ ಜೂನ್ 29 ವರೆಗೆ ಪೂರ್ವಸಿದ್ಧತಾ ಕಾರ್ಯಗಳು ಮತ್ತು ತರಬೇತಿ ಪ್ರಕ್ರಿಯೆಗಳು ನಡೆಯಲಿವೆ. ?ಜೂನ್ 30 ರಿಂದ ಜುಲೈ 29 ಬಿಎಲ್‌ಒ (BLO) ಗಳ ಮೂಲಕ ಮನೆ ಮನೆ ಸಮೀಕ್ಷೆ ನಡೆಸಿ, ನಮೂನೆಗಳನ್ನು ಪಡೆದು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಜುಲೈ 29 ಮತಗಟ್ಟೆಗಳ ತರ್ಕಬದ್ಧಗೊಳಿಸುವಿಕೆ (Rationalization) ಪ್ರಕ್ರಿಯೆ ನಡೆಯಲಿದೆ. ಆಗಸ್ಟ್ 5 ಕರಡು ಮತದಾರರ ಪಟ್ಟಿಯ (Draft Roll) ಪ್ರಕಟಣೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4 ಆಕ್ಷೇಪಣೆಗಳನ್ನು ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಅಕ್ಟೋಬರ್ 3 ರವರೆಗೆ ಸ್ವೀಕೃತವಾದ ಆಕ್ಷೇಪಣೆಗಳ ಇತ್ಯರ್ಥಗೊಳಿಸಬೇಕು, ಅಕ್ಟೋಬರ್ 7 ಕ್ಕೆ ಅಂತಿಮ ಮತದಾರರ ಪಟ್ಟಿಯ ಅಧಿಕೃತವಾಗಿ ಪ್ರಕಟಣೆ ಮಾಡಬೇಕು ಎಂದರು. ಪ್ರತಿಯೊಂದು ಗ್ರಾಮ ಪಂಚಾಯತ್ ಮಟ್ಟದಲ್ಲಿ ಬಿಎಲ್‌ಒ ಸೌಲಭ್ಯ ಕೇಂದ್ರಗಳನ್ನು ಕಡ್ಡಾಯವಾಗಿ ಸ್ಥಾಪಿಸಬೇಕು. ಈ ಕೇಂದ್ರಗಳಿಗೆ ಅಗತ್ಯವಿರುವ ಸಿಸ್ಟಮ್, ಸ್ಕ್ಯಾನರ್ ಹಾಗೂ ವೈ-ಫೈ ಇಂಟರ್ನೆಟ್ ಸೌಲಭ್ಯಗಳನ್ನು ಒದಗಿಸಬೇಕು. ಇದರಿಂದಾಗಿ ಬಿಎಲ್‌ಒಗಳು ಫಾರ್ಮ್‌ಗಳನ್ನು ಸುಲಭವಾಗಿ ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತದೆ. 2025ರ ಮತದಾರರ ಪಟ್ಟಿಯಲ್ಲಿರುವ ಯಾವುದೇ ಹೆಸರನ್ನು ಕರಡು ಪಟ್ಟಿಯಿಂದ ತೆಗೆದುಹಾಕಬೇಕಾದರೆ ಸೂಕ್ತ ಲಿಖಿತ ಆದೇಶ ಇರಬೇಕು ಎಂದು ಎ.ಎ ಕಂಬಾಳಿಮಠ ಅವರು ಸ್ಪಷ್ಟಪಡಿಸಿದರು. ಮತದಾರರ ಪಟ್ಟಿಯಿಂದ ಯಾರ ಹೆಸರೂ ಬಿಟ್ಟುಹೋಗದಂತೆ ನೋಡಿಕೊಳ್ಳಲು ಜಾಗೃತಿ ಮತ್ತು ವ್ಯಾಪಕ ಪ್ರಚಾರ ಕೈಗೊಳ್ಳಲಾಗುವುದು. ಇದಕ್ಕಾಗಿ ಪ್ರತಿ ಜಿಲ್ಲೆಗೆ ?1,50,000 ಬಿಡುಗಡೆ ಮಾಡಲಾಗಿದ್ದು, ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಬ್ಯಾನರ್, ಪೋಸ್ಟರ್‌ಗಳನ್ನು ಅಳವಡಿಸಲಾಗುವುದು. ನಗರ ಮತ್ತು ಗ್ರಾಮೀಣ ಭಾಗದ ಕಸದ ಗಾಡಿಗಳ (ಮೈಕ್ ಮೂಲಕ) ಜಿಂಗಲ್ಸ್ ಹಾಗೂ ಡಂಗುರ ಸಾರುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದರು. ಚುನಾವಣಾ ಆಯೋಗದಿಂದ ಬರುವ ಅಧಿಕೃತ ಆಡಿಯೋ, ವಿಡಿಯೋ ಮತ್ತು ಕರಪತ್ರಗಳನ್ನು ಮಾತ್ರ ಪ್ರಚಾರಕ್ಕೆ ಬಳಸಬೇಕು. ಕಾಲೇಜುಗಳು ಮತ್ತು ಶಾಲೆಗಳ ವ್ಯಾಪ್ತಿಯಲ್ಲಿ ಇಎಲ್‌ಸಿ (ELC) ಕ್ಲಬ್‌ಗಳನ್ನು ಸಕ್ರಿಯಗೊಳಿಸಿ ಜುಲೈ ಮೊದಲ ವಾರದಲ್ಲಿ ಯುವ ಮತದಾರರ ನೋಂದಣಿಗೆ ವಿಶೇಷ ಒತ್ತು ನೀಡಲಾಗುವುದು. ಸ್ತ್ರೀ ಶಕ್ತಿ ಸಂಘಗಳು, ಎನ್‌ಆರ್-ಎಲ್‌ಎಂ ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಈ ಜಾಗೃತಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲಾಗುವುದು. ?ಸಾರ್ವಜನಿಕರು ಮತದಾರರ ಪಟ್ಟಿಗೆ ಸಂಬಂಧಿಸಿದ ಯಾವುದೇ ದೂರು ಅಥವಾ ನೆರವಿಗಾಗಿ ಚುನಾವಣಾ ಸಹಾಯವಾಣಿ ಸಂಖ್ಯೆ 1950 ಕ್ಕೆ ಕರೆ ಮಾಡಬಹುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎ. ಎ. ಕಂಬಾಳಿಮಠ ತಿಳಿಸಿದರು. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಸ್ವೀಪ್ (SVEEP) ಚಟುವಟಿಕೆಗಳ ಮಾಹಿತಿ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸವನಗೌಡ ಕೊಟೂರು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಹಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧ ಮಣ್ಣೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಆರ್. ಎಸ್. ಬುರಡಿ, ಪದವಿ-ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಸ್. ಬಿ ಮಾಸ ನಾಯಕ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,ಜಿಲ್ಲಾಧಿಕಾರಿ ಮಹೆಬೂಬ ಬೈ ತುಂಬರಮಟ್ಟಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಅಮಿತ ಬಿದರಿ, ತಾಲೂಕು ಪಂಚಾಯತ ಕಾರ್ಯ ನಿರ್ವಹಣಾಧಿಕಾರಿ ಡಾ. ಎಚ್.ಎಸ್.ಜಿನಗ, ಯುವಜನ ಸೇವ ಮತ್ತು ಕ್ರೀಡಾ ಇಲಾಖೆಯ ಅಧಿಕ್ಷಕರು ಜಗದೀಶ ಹುಳ್ಳಟ್ಟಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕೇಂದ್ರ ಸಚಿವ ಸ್ಥಾನಕ್ಕೆ ಹೆಚ್‌ಡಿಕೆ ಗುಡ್ ಬೈ ರಾಜ್ಯ ರಾಜಕಾರಣವೇ ಶಾಶ್ವತ



ಮೈಸೂರು: ಜೆಡಿಎಸ್ ಪಕ್ಷದಲ್ಲಿರುವ ಹಿತಶತ್ರುಗಳು ಯಾರೆಂಬುದನ್ನು ಪತ್ತೆ ಮಾಡಬೇಕಿತ್ತು ಆ ಕಾರಣಕ್ಕಾಗಿ ನಮ ಶಾಸಕರ ಪಕ್ಷ ನಿಷ್ಠೆಯ ಪರೀಕ್ಷೆಗಾಗಿಯೇ ವಿಧಾನಪರಿಷತ್ ಚುನಾವಣೆಗೆ ನಮ್ಮ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಲಾಗಿತ್ತು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಪರಿಷತ್ ಚುನಾವಣೆ ಫಲಿತಾಂಶದಿಂದ ಎಲ್ಲಾ ಸಂದೇಹಗಳಿಗೂ ಉತ್ತರ ದೊರೆತಿದೆ. ಜೊತೆಗೆ ಯಾರನ್ನೂ ಅತಿಯಾಗಿ ನಂಬಬಾರದು ಎಂಬ ಪಾಠವನ್ನು ಫಲಿತಾಂಶ ಕಲಿಸಿದೆ. ಚುನಾವಣೆಯಲ್ಲಿ ನಮ್ಮ ಪಕ್ಷದ ಯಾವ ಶಾಸಕರು ಅಡ್ಡಮತದಾನ ಮಾಡಿದ್ದಾರೆ ಎಂಬ ಸಂಪೂರ್ಣ ಮಾಹಿತಿಯೂ ಇದೆ ಎಂದರು.

ಶಾಸಕರು ಯಾವ ಕಾರಣಕ್ಕಾಗಿ ಅಡ್ಡಮತದಾನ ಮಾಡಿದ್ದಾರೆಂಬುದು ಗೊತ್ತಿದೆ. ಪಕ್ಷ ತೊರೆಯುವ ಹಂತದವರೆಗೂ ಚರ್ಚೆ ಮಾಡಿ ಅವರು ಅಡ್ಡಮತದಾನ ಮಾಡಿದ್ದಾರೆ. ಪಕ್ಷ ತೊರೆದು ಹೋಗುವವರು ಹೋಗಲಿ, ಪಕ್ಷವನ್ನು ಸಂಘಟಿಸುವುದು ಹೇಗೆ ಎಂಬುದು ಗೊತ್ತಿದೆ. ಯುವಕರ ಮೂಲಕ ಪಕ್ಷವನ್ನು ಪುನರ್ ಸಂಘಟನೆ ಮಾಡುವುದಾಗಿ ಹೇಳಿದರು.

**ಕೇಂದ್ರದಲ್ಲಿರುವುದು ತಾತ್ಕಾಲಿಕ :**

ಕೇಂದ್ರ ಸರ್ಕಾರದಲ್ಲಿ ಸಚಿವನಾಗಿರುವುದು ತಾತ್ಕಾಲಿಕ. ನನಗೆ ರಾಜ್ಯ ರಾಜಕಾರಣವೇ ಶಾಶ್ವತ. ಹೊಸದಾಗಿ ರಾಜ್ಯ ರಾಜಕಾರಣಕ್ಕೆ ಬರಬೇಕಾಗಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನ ಸಹಿಯನ್ನು ಮಾರಾಟಕ್ಕೆ ಇಟ್ಟಿರಲಿಲ್ಲ. ನನ್ನ ಹಳೆಯ ಸ್ನೇಹಿತರು ಏನೇನೋ ಆಪಾದನೆ ಮಾಡುತ್ತಿದ್ದಾರೆ. ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಪ್ಲೇವಿನ್‌ನಂತಹ ಲಾಟರಿ ನಿಷೇಧ ಮಾಡುವ ಸಂದರ್ಭದಲ್ಲಿ ಕೋಟ್ಯಂತರ ಆಫರ್ ನೀಡಿ ಹೋಟೆಲ್‌ನಲ್ಲಿ ಹಣ ತಂದು ಇಟ್ಟುಕೊಂಡಿದ್ದರು. ಅದನ್ನೆಲ್ಲಾ ನಾನು ಜನರ ಹಿತಕ್ಕಾಗಿ ಧಿಕ್ಕರಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು.

ವಿಧಾನಪರಿಷತ್ ಹಾಗೂ ವಿಧಾನಸಭೆಗೆ ಕೆಲವರಿಗೆ ಟಿಕೆಟ್ ನೀಡಿದಾಗ ಅವರಿಂದ ಪಕ್ಷಕ್ಕೆ ದೇಣಿಗೆ ಪಡೆದಿದ್ದೇನೆಯೇ ಹೊರತು ವೈಯಕ್ತಿಕ ಲಾಭಕ್ಕಾಗಿ ಪಕ್ಷದ ಟಿಕೆಟ್ ಮಾರಿಕೊಂಡಿಲ್ಲ ಎಂದು ಹೇಳಿದರು.

**ಮುಗಿದ ಕಥೆ :**

ಮಾಜಿ ಸಚಿವ ಹಾಗೂ ಶಾಸಕ ಜಿ.ಟಿ.ದೇವೇಗೌಡರ ಹೆಸರನ್ನು ಪ್ರಸ್ತಾಪಿಸಬೇಡಿ. ಅದೆಲ್ಲಾ ಮುಗಿದು ಹೋದ ಕಥೆ. ಅವರು ಒಂದು ಕಾಲಲ್ಲ ಎರಡು ಕಾಲನ್ನೂ ಹೊರಗಿಟ್ಟಿದ್ದಾರೆ. ಈ ಹಿಂದೆ ಅವರ ವಿಚಾರದಲ್ಲಿ ತೆಗೆದುಕೊಂಡಿರುವ ನಿರ್ಧಾರವೇ ಅಂತಿಮ. ಜಿ.ಟಿ.ದೇವೇಗೌಡರು ಯಾವ ಯಾವ ಸಂದರ್ಭದಲ್ಲಿ ಯಾವಯಾವ ರೀತಿ ನಡೆದುಕೊಂಡಿದ್ದಾರೆ ಎಂಬುದು ಗೊತ್ತಿದೆ. ಅವರ ಪೂರ್ವಾಪರ ತಿಳಿದೇ ಈ ಬಾರಿ ಕಠಿಣ ನಿರ್ಧಾರಕ್ಕೆ ಬಂದಿದ್ದೇನೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ಜಿ.ಟಿ.ದೇವೇಗೌಡರ ಮೇಲೆ ವ್ಯಾಮೋಹ ಇರುವುದು ಸತ್ಯ. ಆ ವ್ಯಾಮೋಹವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ನಾನು ಅವಕಾಶ ಮಾಡಿಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

**ಹೋರಾಟ ನಿರಂತರ :**

ಬಿಡದಿ ಟೌನ್‌ಶಿಪ್ ಯೋಜನೆ ವಿಚಾರದಲ್ಲಿ ನನ್ನ ಹೋರಾಟ ನಿರಂತರವಾಗಿದೆ. ರೈತರ ಜೊತೆ ಕಾನೂನಾತಕ ಮಾಡುತ್ತೇನೆ. ಬಿಡದಿ ಸೇರಿದಂತೆ 5 ಟೌನ್‌ಶಿಪ್ ನಿರ್ಮಾಣ ಮಾಡಲು ನಾನು ಮುಖ್ಯಮಂತ್ರಿಯಾಗಿದ್ದಾಗ ನಿರ್ಧಾರ ಮಾಡಿದ್ದು ಸತ್ಯ. ರೈತರ ವಿರೋಧ ವ್ಯಕ್ತವಾದ ಕೂಡಲೇ ಆ ಯೋಜನೆಯನ್ನು ಕೈಬಿಟ್ಟಿದ್ದೆ. ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತರ ಭೂಮಿಯನ್ನು ಲೂಟಿ ಮಾಡಲು ಬಿಡುವುದಿಲ್ಲ. ಮುಂದೆ ಸದನದಲ್ಲಿ ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆ ಬಿಡುಗಡೆ ಮಾಡುತ್ತೇನೆ ಎಂದು ಹೇಳಿದರು.

# ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ ಹಲವು ಐಎಎಸ್ ಅಧಿಕಾರಿಗಳ ವರ್ಗಾವಣೆ



ಬೆಂಗಳೂರು: ಮಹತ್ವದ ಬೆಳವಣಿಗೆಯಲ್ಲಿ ಕರ್ನಾಟಕದ ಆಡಳಿತ ಯಂತ್ರದಲ್ಲಿ ಮೇಜರ್ ಸರ್ಜರಿ ಮಾಡಲಾಗಿದ್ದು, ಕರ್ನಾಟಕದ ಹಲವು ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡಲಾಗಿದೆ.

ಕರ್ನಾಟಕ ಸರ್ಕಾರವು ಐಎಎಸ್ ಅಧಿಕಾರಿಗಳ ವ್ಯಾಪಕ ವರ್ಗಾವಣೆ ನಡೆಸಿದ್ದು, ಹಲವು ಹಿರಿಯ ಅಧಿಕಾರಿಗಳಿಗೆ ಹೆಚ್ಚುವರಿ ಜವಾಬ್ದಾರಿಗಳನ್ನು ವಹಿಸಲಾಗಿದ್ದು, ಆರ್. ಸೆಲ್ವಮಣಿ (2013ನೇ ಬ್ಯಾಚ್), ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರಾಗಿದ್ದು, ಅಕ್ರಮ್ ಪಾಷಾ ಅವರ ವರ್ಗಾವಣೆಯ ಹಿನ್ನೆಲೆಯಲ್ಲಿ ಬೆಂಗಳೂರು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರ (ಎಂಡಿ) ಹೆಚ್ಚುವರಿ ಹೊಣೆಗಾರಿಕೆಯನ್ನು ವಹಿಸಲಾಗಿದೆ. ಅಂಜುಂ ಪರ್ವೇಜ್ (1994ನೇ ಬ್ಯಾಚ್), ಅರಣ್ಯ, ಪರಿಸರ ಮತ್ತು ಪರಿಸರಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದು, ಅವರಿಗೆ ಸಾರ್ವಜನಿಕ ಕಾಮಗಾರಿಗಳ ಇಲಾಖೆಯ (ಪಿಡಬ್ಲ್ಯುಡಿ) ಹೆಚ್ಚುವರಿ ಜವಾಬ್ದಾರಿಯನ್ನೂ ನೀಡಲಾಗಿದೆ.

ಮಾಜಿ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಅಂಜುಂ ಪರ್ವೇಜ್ ಅವರನ್ನು ಅರಣ್ಯ, ಪರಿಸರ ಮತ್ತು ಪರಿಸರಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ರಾಜೇಂದ್ರ ಕುಮಾರ್ ಕಟಾರಿಯಾ (1996ನೇ ಬ್ಯಾಚ್), ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದು, ಅವರಿಗೆ ಗೃಹ ಇಲಾಖೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ಖುಷ್ಬೂ ಚೌಧರಿ (2008ನೇ ಬ್ಯಾಚ್), ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರಾಗಿದ್ದು, ಅವರಿಗೆ ಇನ್ವೆಸ್ಟ್ ಕರ್ನಾಟಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ), ಎನ್‌ಜಿಇಎಫ್ ಅಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ (ಸಿಎಂಡಿ) ಹಾಗೂ ಮೈಸೂರು ಲ್ಯಾಂಪ್ ವರ್ಕ್?ಸಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ (ಎಂಡಿ) ಹುದ್ದೆಗಳ ಹೆಚ್ಚುವರಿ ಜವಾಬ್ದಾರಿಯನ್ನು ನೀಡಲಾಗಿದೆ. ಮುನೀಶ್ ಮೌದ್ಗಿಲ್, ಬೃಹತ್ ಬೆಂಗಳೂರು ಪ್ರಾಧಿಕಾರದ ವಿಶೇಷ ಆಯುಕ್ತರಾಗಿದ್ದು, ಅವರಿಗೆ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ (ಕಾರ್ಯಕ್ರಮ ಮತ್ತು ಯೋಜನಾ ಅನುಷ್ಠಾನ) ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ದೀಪಾ ಚೋಳನ್ ಅವರನ್ನು ಸಾರಿಗೆ ಇಲಾಖೆಗೆ ವರ್ಗಾಯಿಸಲಾಗಿದ್ದು, ಕಾವೇರಿ ಬಿ.ಬಿ. ಅವರಿಗೆ ನಗರಾಭಿವೃದ್ಧಿ ಇಲಾಖೆ (ಯುಡಿ ಮತ್ತು ನಗರಸಭೆಗಳು) ಹೊಣೆಗಾರಿಕೆ ನೀಡಲಾಗಿದೆ.

ವೆಂಕಟೇಶ್ ಎಂ.ವಿ. ಅವರನ್ನು ಸಹಕಾರ ಸಂಘಗಳ ನಿಬಂಧಕರಾಗಿ ನೇಮಿಸಲಾಗಿದ್ದು, ಆರ್. ಸೆಲ್ವಮಣಿ ಅವರನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರಾಗಿ ನಿಯೋಜಿಸಲಾಗಿದೆ. ಡಾ. ಮಂಜುಳಾ ಎನ್, ಎಲೆಕ್ಟ್ರಾನಿಕ್?ಸ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಯಾಗಿದ್ದು, ಅವರನ್ನು ಬೆಂಗಳೂರು ಜಲ ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂ-ಎಸ್‌ಎಸ್‌ಬಿ) ಅಧ್ಯಕ್ಷರಾಗಿ ನೇಮಿಸಲಾಗಿದೆ. ಈ ಹುದ್ದೆಯಲ್ಲಿದ್ದ ಡಾ. ರಾಮ ಪ್ರಸಾತ್ ಮನೋಹರ್ ವಿ. ಅವರನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾಯಿಸಲಾಗಿದೆ. ಜಗದೀಶ ಜಿ., ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದು, ಅವರನ್ನು ಬೆಂಗಳೂರು ಕೇಂದ್ರ ನಗರ ನಿಗಮದ ಆಯುಕ್ತರಾಗಿ ನೇಮಿಸಲಾಗಿದೆ. ಸಹಕಾರ ಸಂಘಗಳ ನಿಬಂಧಕರಾಗಿದ್ದ ಪಿಎಸ್ ಕಾಂತರಾಜು ಅವರನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿ ನಿಯೋಜಿಸಲಾಗಿದೆ.

ಅಂತೆಯೇ ಪಿ. ಮಣಿವಣ್ಣನ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತರಾಗಿದ್ದು, ಅವರಿಗೆ ನಗರ ಭೂ ಸಾರಿಗೆ ನಿರ್ದೇಶನಾಲಯದ (ಡಲ್ಟ್) ಆಯುಕ್ತರ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ಕೆ.ಬಿ. ಶಿವಕುಮಾರ್, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ವ್ಯವಸ್ಥಾಪಕ ನಿರ್ದೇಶಕರಾಗಿದ್ದವರು ವರ್ಗಾವಣೆಯಾಗಿದ್ದು, ಅವರನ್ನು ಕೆ-ಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ. ರಘುನಂದನ್ ಮೂರ್ತಿ ಅವರನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಈ ವರ್ಗಾವಣೆ ಆದೇಶಗಳು ರಾಜ್ಯ ಸರ್ಕಾರದ ಆಡಳಿತಾತಕ ಪುನರ್‌ವ್ಯವಸ್ಥೆಯ ಭಾಗವಾಗಿದ್ದು, ಪ್ರಮುಖ ಇಲಾಖೆಗಳ ಕಾರ್ಯ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿವೆ.

## ಶಸ್ತ್ರಾಸ್ತ್ರ ಸಾಗಣೆ ಮಾಡುತ್ತಿದ್ದ ಎಂಟು ಉಗ್ರರ ಬಂಧನ



ಇಂಫಾಲ: ಮಣಿಪುರದ ಕಣಿವೆ ಜಿಲ್ಲೆಗಳ ವಿವಿಧ ಭಾಗಗಳಿಗೆ ಸುಲಿಗೆ ಚಟುವಟಿಕೆಗಳು ಮತ್ತು ಶಸ್ತ್ರಾಸ್ತ್ರ ಮತ್ತು ಸ್ಫೋಟಕ ವಸ್ತುಗಳನ್ನು ಪೂರೈಸುವ ಆರೋಪದ ಮೇಲೆ ನಿಷೇಧಿತ ಸಂಘಟನೆಯ ಎರಡು ಬಣಗಳಿಗೆ ಸೇರಿದ ಎಂಟು ಉಗ್ರರನ್ನು ಭದ್ರತಾ ಪಡೆಗಳು ಬಂಧಿಸಿವೆ.

ಹ್ಯಾಂಡ್ ಗ್ರೆನೇಡ್‌ಗಳನ್ನು ಪೂರೈಸಿದ ಆರೋಪದ ಮೇಲೆ ಇಂಫಾಲ ಪೂರ್ವ ಜಿಲ್ಲೆಯ ಹಲವಾರು ಸ್ಥಳಗಳಿಂದ ನಿಷೇಧಿತ ಕೆಸಿಪಿ ( ಪೀಪಲ್ಸ್ ವಾರ್ ಗ್ರೂಪ್) ನ ನಾಲ್ವರು ಸದಸ್ಯರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಹೇಳಿಕೆ ತಿಳಿಸಿದೆ. ಎಲ್ಲರೂ ಇಂಫಾಲ ಪೂರ್ವದ ನಿವಾಸಿಗಳು ಎಂದು ಪೊಲೀಸರು ತಿಳಿಸಿದ್ದಾರೆ.ಸುಲಿಗೆ ಚಟುವಟಿಕೆಗಳು ಮತ್ತು ಶಸ್ತ್ರಾಸ್ತ್ರ ಪೂರೈಕೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಕಾಕ್ಚಿಂಗ್ ಜಿಲ್ಲೆಯಿಂದ ನಿಷೇಧಿತ ಕೆಸಿಪಿ (ಎಂಎಫ್‌ಎಲ್) ನ ನಾಲ್ವರು ಸಕ್ರಿಯ ಸದಸ್ಯರನ್ನು ಭದ್ರತಾ ಪಡೆಗಳು ಬಂಧಿಸಿವೆ.ಅಕ್ರಮ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಎಲ್ಲಾ ಜನರನ್ನು ನಿಶ್ಯಸ್ತ್ರಗೊಳಿಸದ ಹೊರತು ರಾಜ್ಯದಲ್ಲಿ ಶಾಂತಿ ಅಸಂಭವ ಎಂದು ಮುಖ್ಯಮಂತ್ರಿ ವೈ ಖೇಮ್‌ಚಂದ್ ಸಿಂಗ್ ಇತ್ತೀಚೆಗೆ ಹೇಳಿದ್ದಾರೆ. 2023 ರಲ್ಲಿ ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಪ್ರಾರಂಭವಾದಾಗಿನಿಂದ ಭದ್ರತಾ ಪಡೆಗಳಿಂದ ಲೂಟಿ ಮಾಡಲಾದ ಮತ್ತು ಅಕ್ರಮವಾಗಿ ಖರೀದಿಸಿದ ಬಂದೂಕುಗಳು ಸೇರಿದಂತೆ ಅಕ್ರಮ ಶಸ್ತ್ರಾಸ್ತ್ರಗಳನ್ನು ಬಳಸಲಾಗುತ್ತಿದೆ. ಎರಡು ವರ್ಷಗಳ ಹಿಂದೆ ಜನಾಂಗೀಯ ಹಿಂಸಾಚಾರ ಭುಗಿಲೆದ್ದಾಗಿನಿಂದ ಭದ್ರತಾ ಪಡೆಗಳು ಮಣಿಪುರದಲ್ಲಿ ಶೋಧ ಕಾರ್ಯಾಚರಣೆಗಳನ್ನು ನಡೆಸುತ್ತಿವೆ. ಮೇ 2023 ರಿಂದ ಮೈತೈಸ್ ಮತ್ತು ಕುಕಿ-ಜೋ ಗುಂಪುಗಳ ನಡುವಿನ ಜನಾಂಗೀಯ ಹಿಂಸಾಚಾರದಲ್ಲಿ 260 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ.

# ಅಡ್ಡ ಮತದಾನ : ಬಂಡಾಯ ಶಾಸಕರ ವಿರುದ್ಧ ಶಿಸ್ತುಕ್ರಮಕ್ಕೆ ಬಿಜೆಪಿ ಸಿದ್ಧತೆ ಶೋಧನಾ ತಂಡ ರಚನೆ



ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಕೆಲವು ಶಾಸಕರು ಅಡ್ಡ ಮತದಾನ ನಡೆಸಿರುವ ಹಿನ್ನೆಲೆಯಲ್ಲಿ ಸತ್ಯಸತ್ಯತೆ ತಿಳಿಯಲು ಬಿಜೆಪಿ ಶೋಧನಾ ತಂಡವನ್ನು ರಚಿಸಿದೆ. ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹಾಗೂ ಶಾಸಕ ಮಹೇಶ್ ತೆಂಗಿನಕಾಯಿ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿದೆ. ಈ ಮೂವರು ನೇತೃತ್ವದ ಸಮಿತಿಯು ವಿಧಾನಪರಿಷತ್‌ನ ಚುನಾವಣೆಯಲ್ಲಿ ಬಿಜೆಪಿ ಶಾಸಕರಿಂದ ಅಡ್ಡ ಮತದಾನ ಮಾಡಿರುವ ಕುರಿತು ಇದೇ 25ರೊಳಗೆ ವರದಿಯನ್ನು ನೀಡಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೂಚಿಸಿದ್ದಾರೆ.

ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿರುವುದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿರುವ ಬಿಜೆಪಿ ಕೇಂದ್ರ ವರಿಷ್ಠರು, ಪಕ್ಷದ ಶಿಸ್ತನ್ನು ಮರುಸ್ಥಾಪಿಸಲು ಬಂಡಾಯ ಶಾಸಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಸಿದ್ಧತೆಯಲ್ಲಿದ್ದಾರೆ. ಬಂಡಾಯ ಶಾಸಕರ ವಿರುದ್ಧ ಶಿಸ್ತುಕ್ರಮಕ್ಕೆ ಬಿಜೆಪಿ ಸಿದ್ಧತೆ : ಶಿಸ್ತುಕ್ರಮದ ಭಾಗವಾಗಿ ಉಚ್ಚಾಟನೆ ಅಥವಾ ನೋಟಿಸ್ ನೀಡುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಈ ಹಿಂದೆ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರಂತಹ ಶಾಸಕರನ್ನು ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಉಚ್ಚಾಟಿಸಿದ ಮಾದರಿಯಲ್ಲೇ, ಈ ಬಾರಿ ಅಡ್ಡ ಮತದಾನ ಮಾಡಿದ ಶಾಸಕರ ಮೇಲೂ ಇದೇ ಕ್ರಮ ಕೈಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಪ್ರಸ್ತುತ, ಪಕ್ಷದ ವರಿಷ್ಠರು ಈ ಬಗ್ಗೆ ಆಂತರಿಕ ತನಿಖೆ ಮತ್ತು ಶಾಸಕರೊಂದಿಗೆ ಮಾತುಕತೆ ನಡೆಸಿ ಶೀಘ್ರದಲ್ಲೇ ಅಂತಿಮ ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ.

ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವುದು ಫಲಿತಾಂಶದಲ್ಲಿ ಸ್ಪಷ್ಟವಾಗಿದೆ. ಬಿಜೆಪಿಯ ಕೆಲವು ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿರುವುದು ರಾಜ್ಯ ಬಿಜೆಪಿಗೆ ದೊಡ್ಡ ಹಿನ್ನಡೆಯನ್ನು ತಂದೊಡ್ಡಿದೆ.ಈ ವಿದ್ಯಮಾನವನ್ನು ಬಿಜೆಪಿ ವರಿಷ್ಠರು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದಾರೆ. ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಅಡ್ಡ ಮತದಾನ ಮಾಡಿದ ಶಾಸಕರ ವಿವರವನ್ನು ಸಂಗ್ರಹಿಸಿ ರಾಷ್ಟ್ರೀಯ ನಾಯಕರಿಗೆ ವರದಿ ಸಲ್ಲಿಸಿದ್ದಾರೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ತನ್ನ ಅಭ್ಯರ್ಥಿಗಳ ಗೆಲುವಿಗಾಗಿ ಬಿಗಿ ತಂತ್ರಗಳನ್ನು ಹೆಣೆದಿತ್ತು. ಪಕ್ಷದ ಎಲ್ಲಾ ಶಾಸಕರಿಗೆ ಕಡ್ಡಾಯವಾಗಿ ವಿಪ್ ಜಾರಿಗೊಳಿಸಲಾಗಿತ್ತು. ಆದರೆ, ಮತ ಎಣಿಕೆಯ ನಂತರ ಬಿಜೆಪಿಯ ಕೆಲವು ಶಾಸಕರು ಪಕ್ಷದ ಅಧಿಕೃತ ಅಭ್ಯರ್ಥಿಗಳಿಗೆ ಮತ ನೀಡದೆ, ವಿರೋಧ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತ ಚಲಾಯಿಸಿರುವುದು ಸ್ಪಷ್ಟವಾಗಿದೆ. ಈ ಅಡ್ಡ ಮತದಾನವು ಬಿಜೆಪಿಗೆ ಭಾರೀ ಮುಜುಗರವನ್ನುಂಟು ಮಾಡಿದೆ. ಪಕ್ಷದ ಆಂತರಿಕ ಶಿಸ್ತನ್ನು ಹದಗೆಡಿಸಿರುವ ಶಾಸಕರನ್ನು ಕೇವಲ ಅಮಾನತುಗೊಳಿಸದೆ, ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟಿಸುವ ಕುರಿತು ರಾಷ್ಟ್ರೀಯ ನಾಯಕರು ಗಂಭೀರವಾಗಿ ಚರ್ಚಿಸುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಪಕ್ಷದಲ್ಲಿ ಶಿಸ್ತು ಪಾಲನೆ ಕಡ್ಡಾಯ ಎಂಬ ಕಠಿಣ ಸಂದೇಶವನ್ನು ಇತರ ಶಾಸಕರಿಗೆ ರವಾನಿಸುವುದು ಹೈಕಮಾಂಡ್‌ನ ಉದ್ದೇಶವಾಗಿದೆ. ರಾಜ್ಯ ಘಟಕದಿಂದ ಅಡ್ಡ ಮತದಾನ ಮಾಡಿದ ಶಾಸಕರ ಪಟ್ಟಿ ಹಾಗೂ ಅವರ ವಿರುದ್ಧ ಕೈಗೊಳ್ಳಬಹುದಾದ ಕಾನೂನು ಮತ್ತು ಸಾಂವಿಧಾನಿಕ ಕ್ರಮಗಳ ಬಗ್ಗೆ ವರದಿಯನ್ನು ಕೇಂದ್ರ ವರಿಷ್ಠರು ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಳೆದ ಕೆಲವು ಚುನಾವಣೆಗಳಿಂದಲೂ ರಾಜ್ಯ ಬಿಜೆಪಿಯಲ್ಲಿ ಆಂತರಿಕ ಭಿನ್ನಮತ ಮತ್ತು ಶಾಸಕರ ಅಸಮಾಧಾನ ಎದ್ದು ಕಾಣುತ್ತಿದೆ. ಆಪರೇಷನ್ ಕಮಲ ಅಥವಾ ಇತರ ಮೂಲಗಳಿಂದ ಪಕ್ಷಕ್ಕೆ ಬಂದ ಶಾಸಕರ ನಿಷ್ಠೆಯ ಬಗ್ಗೆ ಪಕ್ಷದೊಳಗೇ ಅನುಮಾನಗಳು ವ್ಯಕ್ತವಾಗುತ್ತಿವೆ. ಈ ಬಾರಿಯ ಅಡ್ಡ ಮತದಾನವು ಪಕ್ಷದ ಸಂಘಟನಾತಕ ವೈಫಲ್ಯವನ್ನೂ ಎತ್ತಿ ತೋರಿಸಿದೆ. ಬಿಜೆಪಿ ಹೈಕಮಾಂಡ್ ಈಗ ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವಾಗ ಪಕ್ಷದ ಸಂಖ್ಯಾಬಲ ಮತ್ತು ಕಾನೂನು ತೊಡಕುಗಳನ್ನು ಸಹ ಗಮನಿಸಬೇಕಿದೆ.

**ಹಿನ್ನೆಲೆ:**

ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ ನಡೆದ ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿ-ಎಸ್ ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವಿಗಾಗಿ ಮತಗಳ ಕ್ರೋಢೀಕರಣ ಮಾಡಲಾಗಿತ್ತು. ಆದರೆ, ಮೈತ್ರಿ ಅಭ್ಯರ್ಥಿಗಳಿಗೆ ನಿರೀಕ್ಷಿತ ಪ್ರಮಾಣದಲ್ಲಿ ಮತಗಳು ಸಿಗದಿರುವುದು ಅಡ್ಡ ಮತದಾನ ನಡೆದಿರುವುದನ್ನು ದೃಢಪಡಿಸಿದೆ.

**ಅಡ್ಡ ಮತದಾನದ ಆರೋಪ:**

ಬಿಜೆಪಿ ತನ್ನ ಶಾಸಕರಿಗೆ ನೀಡಿದ್ದ ಮತಗಳನ್ನು ಮೈತ್ರಿ ಅಭ್ಯರ್ಥಿಗೆ ಚಲಾಯಿಸುವಂತೆ ಸೂಚನೆ ನೀಡಲಾಗಿತ್ತು. ಆದರೆ, ಅಂದಾಜು 3 ರಿಂದ 6 ಬಿಜೆಪಿ ಶಾಸಕರು ಪಕ್ಷದ ನಿರ್ಧಾರಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ (ಅಡ್ಡ ಮತದಾನ ಮಾಡಿದ್ದಾರೆ) ಎಂಬ ಆರೋಪ ಕೇಳಿಬಂದಿದೆ. ಈ ಬೆಳವಣಿಗೆಯು ಮುಂಬರುವ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಬೆಂಗಳೂರು ನಗರ ಪಾಲಿಕೆ ಚುನಾವಣೆಗಳ ಮೇಲೆ ಪರಿಣಾಮ ಬೀರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಅಲ್ಲದೆ, ಇದು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಒಗ್ಗಟ್ಟಿನ ಬಗ್ಗೆಯೂ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ರಾಜಕೀಯ ಬೆಳವಣಿಗೆಯು ರಾಜ್ಯ ಬಿಜೆಪಿಯಲ್ಲಿ ಆಂತರಿಕ ಅಸಮಾಧಾನ ಮತ್ತು ಶಿಸ್ತಿನ ಕೊರತೆಯನ್ನು ಎತ್ತಿ ತೋರಿಸಿದ್ದು, ಮುಂಬರುವ ದಿನಗಳಲ್ಲಿ ಪಕ್ಷವು ಯಾವ ರೀತಿಯ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂಬುದು ಕುತೂಹಲ ಮೂಡಿಸಿದೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com